UNIVERSITY LIBRARY
Newspaper's Agri Clippings
For more information visit University Library Website
Web - uasbagrilibindia.org
E-mail- librarian@uasbangalore.edu.in
Thursday
19-11-2026



Udayavani pg 04

ಜಿಕೆವಿಕೆ ಕೃಷಿಮೇಳದಲ್ಲಿ 'ಉದಯವಾಣಿ' ಪ್ರದರ್ಶನ-ಮಾರಾಟ ಮಳಿಗೆಗೆ ಬೆಂ.ಕೃಷಿ ವಿವಿ ಕುಲಪತಿ ಡಾ.ಪಿ ವೆಂಕಟರವಣ, ವಿಸ್ತರಣಾ ನಿರ್ದೇಶಕ ಡಾ.ಕೆ ಪಿ ರಘುಪ್ರಸಾದ್, ಚಿಂತಾಮಣಿ ರೇಷ್ಮೆ ಕೃಷಿ ಕಾಲೇಜಿನ ಡೀನ್ ಡಾ. ರಾಮಕೃಷ್ಣನಾಯಕ ಮತ್ತಿತರು ಭೇಟಿ ನೀಡಿದರು. ಸಂಸ್ಥೆಯ ಪ್ರಸರಣ ವಿಭಾಗದ ಅಸಿಸ್ಟೆಂಟ್ ಮ್ಯಾನೇಜರ್ ವಿರೂಪಾಕ್ಷಗೌಡ ಚಿಕ್ಕನ ಗೌಡರ್, ಹಿರಿಯ ಕಾರ್ಯನಿರ್ವಾಹಕರಾದ ಜೆ.ಬಿ.ಪದ್ಮನಾಭ ಕುಲಕರ್ಣಿ, ಆದಿನಾರಾಯಣ, ಪ್ರದೀಪ್ ಜಿ, ಮಂಜುನಾಥ್ ಬಿ.ವೈ. ಇದ್ದರು.

ಬರ ಎದುರಿಸಲು ಸಜ್ಜಾಗಿರುವಂತೆ ರೈತರಿಗೆ ವಿಜ್ಞಾನಿಗಳ ಸಲಹೆ | ಸಾಧಕ ಕೃಷಿಕರಿಗೆ ಪ್ರಗತಿಪರ ರೈತ ಪ್ರಶಸ್ತಿ ಪ್ರದಾನ

ಕೃಷಿ ಮೇಳಕ್ಕೆ ತೆರೆ ಒಂಬತ್ತು ಲಕ್ಷ ಜನರಿಂದ ವೀಕ್ಷಣೆ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ತನ್ನ ಕ್ಯಾಂಪಸ್ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಮೂರು ದಿನಗಳ ವಾರ್ಷಿಕ ಕೃಷಿ ಮೇಳಕ್ಕೆ ಬುಧವಾರ ತೆರೆ ಬಿದ್ದಿದೆ. ಒಟ್ಟು 9 ಲಕ್ಷ ಮಂದಿ ಭೇಟಿ ನೀಡಿ ವ್ಯವಸಾಯ ಕ್ಷೇತ್ರದಲ್ಲಾಗಿರುವ ಹೊಸ ಆವಿಷ್ಕಾರ, ಸಾಧನೆ, ಸಂಶೋಧನೆ, ರೈತ ಕೇಂದ್ರಿತ ಕಾರ್ಯಕ್ರಮಗಳನ್ನು ಕಣ್ತುಂಬಿಕೊಂಡರು.

ಬರ ಹಿನ್ನೆಲೆಯಲ್ಲಿ ಒಂದು ದಿನಕ್ಕೆ ಸೀಮಿತಗೊಂಡು, ನಂತರ ಮೂರು ದಿನಕ್ಕೆ ವಿಸ್ತರಣೆಯಾದರೂ, ಈ ಬಾರಿ ಕೃಷಿ ವಿವಿಗಳು, ಇಲಾಖೆಗಳು ಹಾಗೂ ಐಸಿಎಆರ್ ಸಂಸ್ಥೆಗಳು ಮಾತ್ರ ಪಾಲ್ಗೊಂಡಿದ್ದವು. ವಾಣಿಜ್ಯ ಕಂಪನಿಗಳಿಗೆ ಅವಕಾಶ ಇಲ್ಲದ ಕಾರಣ ಹಿಂದಿನಂತೆ ಜಾತ್ರೆ ರೀತಿ ಕಾಣದೆ ಕೇವಲ ರೈತರಿಗಷ್ಟೇ ನಡೆದ ಕಾರ್ಯಕ್ರಮದಂತಿತ್ತು. ಇದು ಅನ್ನದಾತರಿಗೆ ಹೊಸ ಅನುಭವ ನೀಡಿದ್ದು, ಮುಂದಿನ ದಿನಗಳಲ್ಲಿ ರೈತಾಪಿ ವರ್ಗಕ್ಕೆ ಹೆಚ್ಚು ಮೀಸಲಿಡುವ ಮೇಳ ಆಗಬೇಕು ಎಂಬ ಮಾತುಗಳು ವ್ಯಕ್ತವಾಯಿತು.

■ ಮಳಿಗೆಗಳಲ್ಲಿ ಅನ್ನದಾತರಿಗೆ ಭರಪೂರ ಮಾಹಿತಿ

100ಕ್ಕೂ ಅಧಿಕ ಸಂಖ್ಯೆಯಲ್ಲಿದ್ದ ಮಳಿಗೆಗಳಲ್ಲಿ ರೈತರಿಗೆ ಭರಪೂರ ಮಾಹಿತಿ ದೊರೆಯಿತು. ನೂಕುನುಗ್ಗಲು ಇಲ್ಲದ ಕಾರಣ ಅನ್ನದಾತರು ಸಾವಧಾನವಾಗಿ ಬೆಳೆಗಳ ಹೊಸ ತಳಿಗಳು, ಧಾನ್ಯಗಳ ಸಂಸ್ಕರಣೆ, ಮೌಲ್ಯವರ್ಧನೆಯ ವಿಧಾನಗಳಲ್ಲಿ ಅನುಸಿರುವ ಅಂಶಗಳನ್ನು ಸಂಗ್ರಹಿಸಿದರು. ವಿಭಾಗದ ಮುಖ್ಯಸ್ಥರು, ವಿಜ್ಞಾನಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಕೃಷಿಕರಿಗೆ ಮಾಹಿತಿ ಹಾಗೂ ಮಾರ್ಗದರ್ಶನ ನೀಡಿದರು. ಸಿರಿಧಾನ್ಯ, ಎಣ್ಣೆ ಕಾಳುಗಳು, ಸಮಗ್ರ ಕೃಷಿ ಪದ್ಧತಿ, ಯಂತ್ರೋಪಕರಣಗಳ ಸ್ಟಾಲ್‌ಗಳಲ್ಲಿ ಹೆಚ್ಚಿನ ರೈತರು ಕಂಡುಬಂದರು. ಬರ ತಾಳಿಕೆ ಮಾಡಿಕೊಳ್ಳುವ ಹೊಸ ತಳಿಗಳು ಸೇರಿ ಒಂದೇ ಪ್ರದೇಶದಲ್ಲಿ 78 ವೈವಿಧ್ಯಮಯ ಬೆಳೆಗಳ ಬಗ್ಗೆ ಮಾಹಿತಿ ಸಿಗುವಂತೆ ಪ್ರಾತ್ಯಕ್ಷಿಕೆ ಏರ್ಪಡಿಸಿದ್ದಕ್ಕೆ ಖುಷಿ ವ್ಯಕ್ತಪಡಿಸಿದರು. ವಾಣಿಜ್ಯ ಬೆಳೆಗಳ ಬಗ್ಗೆ ಹೆಚ್ಚಿನ ಮಾಹಿತಿ ಸಿಗಲಿಲ್ಲ ಎಂಬ ಆಕ್ಷೇಪವೂ ವ್ಯಕ್ತವಾಯಿತು. ಕಡೆಯ ದಿನವಾಗಿದ್ದರಿಂದ ರೈತರು ಹಾಗೂ ಸಾರ್ವಜನಿಕರು ವಿವಿಧ ಗಿಡಗಳನ್ನು ಖರೀದಿಸಿ ಮನೆಗೆ ಒಯ್ದರು. ವಿವಿಯ ನರ್ಸರಿ ಹಾಗೂ ವಿವಿಧ ವಿಭಾಗಗಳಲ್ಲಿನ ರಿಯಾಯಿತಿ ದರದಲ್ಲಿ ಸಸಿ ಮಾರಾಟ ಮಾಡಲಾಯಿತು. ರಾಜ್ಯ ಬೀಜ ನಿಗಮ, ವಿವಿಯ ಮಳಿಗೆಯಲ್ಲಿ ಬಿತ್ತನೆ ಬೀಜಗಳನ್ನು ರೈತರು ಖರೀದಿಸಿದರು.



ಮೇಳದ ಮಳಿಗೆಯೊಂದರಲ್ಲಿ ವಿದ್ಯಾರ್ಥಿನಿಯರು ಮಾಹಿತಿ ಪಡೆದರು.



ವಿಜಯವಾಣಿ ಚಿತ್ರಗಳು

ಕೃಷಿ ಮೇಳದ ಕೊನೆಯ ದಿನ ಬುಧವಾರ ರೈತರು ಮತ್ತು ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು.

ಮೂರು ದಿನ ಆಯೋಜಿಸಿದ್ದ ಕೃಷಿ ಮೇಳದಲ್ಲಿ ವಿವಿ ಶಕ್ತಿಮೀರಿ ಕೆಲಸ ಮಾಡಿದ ಪರಿಣಾಮ 9 ಲಕ್ಷ ರೈತರು ಮೇಳಕ್ಕೆ ಭೇಟಿ ನೀಡಿದ್ದಾರೆ. ರೈತರು ಬರ ಎದುರಿಸಲು ಬೇಕಾದ ಆತ್ಮಸ್ಥೈರ್ಯದ ಜತೆಗೆ ಬರ ನಿರೋಧಕ ತಳಿಗಳ ಬಗ್ಗೆ ವಿವರಣೆ ನೀಡಲಾಗಿದೆ. ಕೃಷಿಕರಿಗೆ ಯಾವುದೇ ಸಮಸ್ಯೆ ಇದ್ದಲ್ಲಿ ಅದಕ್ಕೆ ಪರಿಹಾರ ನೀಡಲು ವಿವಿ ಸದಾ ಸನ್ನದ್ಧವಾಗಿರುತ್ತದೆ.

| ಡಾ. ಪಿ. ವೆಂಕಟರಮಣ
ಬೆಂ. ಕೃಷಿ ವಿವಿಯ ಪ್ರಭಾರ ಕುಲಪತಿ

ಕೃಷಿ ಕೇವಲ ಉದ್ಯೋಗವಲ್ಲ ಆರ್ಥಿಕತೆಯ ಆಧಾರಸ್ತಂಭ

ಬೆಂಗಳೂರು: ಕೃಷಿ ಕೇವಲ ಉದ್ಯೋಗ ಅಲ್ಲ, ಅದು ನಮ್ಮ ದೇಶದ ಆರ್ಥಿಕತೆಯ ಆಧಾರಸ್ತಂಭವಾಗಿದೆ. ಆಹಾರ ಭದ್ರತೆಯ ಜೀವನಾಡಿ ಮತ್ತು ಗ್ರಾಮೀಣ ಭಾರತದ ಬದುಕಿನ ಮೂಲಾಧಾರವಾಗಿದೆ ಎಂದು ಚಿಕ್ಕಬಳ್ಳಾಪುರ ಸಂಸದ ಡಾ. ಕೆ. ಸುಧಾಕರ್ ಅಭಿಪ್ರಾಯಪಟ್ಟರು.

ಸಮಾರೋಪದಲ್ಲಿ ಮಾತನಾಡಿದ ಅವರು, ರೈತರು ಸಮೃದ್ಧವಾಗಿದ್ದರೆ ಮಾತ್ರ ಹಳ್ಳಿಗಳು ಅಭಿವೃದ್ಧಿಯಾಗುತ್ತವೆ. ಗ್ರಾಮಗಳು ಅಭಿವೃದ್ಧಿಯಾದಾಗ ಮಾತ್ರ ರಾಜ್ಯ ಹಾಗೂ ದೇಶ ಪ್ರಗತಿಯ ಪಥದಲ್ಲಿ ಸಾಗಲು ಸಾಧ್ಯ. ಆದರೆ ಇಂದು ವ್ಯವಸಾಯ ಕ್ಷೇತ್ರವು ವಿವಿಧ ಸವಾಲುಗಳನ್ನು ಎದುರಿಸುತ್ತಿದ್ದು, ರೈತರ ಬದುಕಿನ ಮೇಲೆ ಪರಿಣಾಮ ಬೀರಿದೆ. ಈ ಸಮಸ್ಯೆಗಳಿಗೆ ಕೃಷಿ ಮೇಳವು ಪರಿಹಾರ ನೀಡುವ ಯತ್ನ ಮಾಡಿರುವುದು ಶ್ಲಾಘನೀಯ ಎಂದರು. ಪ್ರಸ್ತುತ ಕೃಷಿ ಎಂದರೆ ಸಾಂಪ್ರದಾಯಿಕ ಬೆಳೆ ಬೆಳೆಯುವುದಕ್ಕೆ ಸೀಮಿತವಾಗದೆ ಆಹಾರ ಸಂಸ್ಕರಣೆ, ಮೌಲ್ಯವರ್ಧನೆ, ಡಿಜಿಟಲ್ ಕೃಷಿ, ಕೃಷಿ ಆಧಾರಿತ ನವೋದ್ಯಮ ಮೂಲಕ ಯುವಜನತೆಗೆ ಅವಕಾಶಗಳ ಬಾಗಿಲು ತೆರೆದಿದೆ. ಇದನ್ನು ನಮ್ಮ ಯುವ ಪೀಳಿಗೆಗೆ ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ವಿಧಾನ ಪರಿಷತ್ ಸದಸ್ಯ ಎ.ಪಿ. ರಂಗನಾಥ್, ಕೃಷಿ ಆಯುಕ್ತ ಡಾ. ಜಿ.ಸಿ. ಸತೀಶ್, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಡಾ. ಕೆ.ಎಸ್. ರಾಜಶೇಖರಪ್ಪ, ಎಂ.ಒ. ನವೀನ್, ಡೀನ್ (ಸ್ನಾತಕೋತ್ತರ ವಿಭಾಗ) ಡಾ. ಎನ್. ನಟರಾಜ ಕರಬ, ಡಾ. ಕೆ.ಪಿ. ರಘುಪ್ರಸಾದ್ ಮತ್ತಿತರರು ಪಾಲ್ಗೊಂಡಿದ್ದರು.

ಸಮಾರೋಪಕ್ಕೆ ಸಚಿವರ ಗೈರು

ಈ ಬಾರಿಯ ಕೃಷಿ ಮೇಳದ ಸಮಾರೋಪಕ್ಕೆ ಯಾವೊಬ್ಬ ಸಚಿವರೂ ಪಾಲ್ಗೊಳ್ಳಲಿಲ್ಲ. ಜತೆಗೆ ವಿವಿಯ ಕುಲಾಧಿಪತಿಯೂ ಆಗಿರುವ ರಾಜ್ಯಪಾಲರು ಆಗಮಿಸಲಿಲ್ಲ. ಉದ್ಘಾಟನೆ ಆಗಮಿಸಬೇಕಿದ್ದ ಮುಖ್ಯಮಂತ್ರಿ, ಡಿಸಿಎಂ ಕೂಡ ಗೈರುಹಾಜರಾದರು. ಸಚಿವರಂತೆ ಕೃಷಿ ಸಂಬಂಧಿತ ಇಲಾಖೆಗಳ ಹಲವು ಹಿರಿಯ ಅಧಿಕಾರಿಗಳು ಕೂಡ ಮೇಳದತ್ತ ಸುಳಿಯಲಿಲ್ಲ. ಹಾಗಾಗಿ ಸ್ಥಳೀಯ ಸಂಸದ ಡಾ. ಕೆ.ಸುಧಾಕರ್ ಅವರು ಸಮಾರೋಪದಲ್ಲಿ ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.



ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ನಾಲ್ವರು ಕೃಷಿಕರಿಗೆ 'ಜಿಲ್ಲಾ ಮಟ್ಟದ ಪ್ರಗತಿಪರ ರೈತ ಹಾಗೂ ರೈತ ಮಹಿಳೆ ಪ್ರಶಸ್ತಿ' ವಿತರಿಸಲಾಯಿತು. ಸಂಸದ ಡಾ. ಕೆ.ಸುಧಾಕರ್, ಮೇಲ್ಮನೆ ಸದಸ್ಯ ಎ.ಪಿ. ರಂಗನಾಥ್, ವಿವಿ ಕುಲಪತಿ ಡಾ. ಪಿ. ವೆಂಕಟರಮಣ ಮತ್ತಿತರರು ಉಪಸ್ಥಿತರಿದ್ದರು.

ಹವಾಮಾನ ಸ್ನೇಹಿ ಕೃಷಿ ಅಳವಡಿಸಿಕೊಳ್ಳಲಿ





•**ಬೆಂಗಳೂರು:** ಕೃಷಿ ಕ್ಷೇತ್ರದ ಆಧುನಿಕ ತಂತ್ರಜ್ಞಾನ, ಹವಾಮಾನ ಸ್ನೇಹಿ ಕೃಷಿ ಪದ್ಧತಿ ಹಾಗೂ ರೈತರ ಸಾಧನೆಯನ್ನು ಪರಿಚಯಿಸುವ ಉದ್ದೇಶದಿಂದ ಮೂರು ದಿನಗಳ ಕಾಲ ಜಿಕೆವಿಕೆಯಲ್ಲಿ ನಡೆದ ಕೃಷಿ ಮೇಳ-2026ದಲ್ಲಿ 9.10 ಲಕ್ಷ ಜನ ಭಾಗವಹಿಸಿದ್ದಾರೆ. ಈ ಬಾರಿ ಬರದ ಹಿನ್ನೆಲೆಯಲ್ಲಿ ಸರಳವಾಗಿ ಆಯೋಜಿಸಲಾಗಿದ್ದ ಕೃಷಿ ಮೇಳ -2026 ಬುಧವಾರ ತೆರೆಕಂಡಿದ್ದು, ಒಟ್ಟು 9.10 ಲಕ್ಷ ಮಂದಿ ಭೇಟಿ ನೀಡಿದ್ದಾರೆ. ನ.16ರಂದು 1.10, ನ.17ರಂದು 3.10 ಹಾಗೂ ನ.18ರಂದು 4.90 ಮಂದಿ ರೈತರು, ಸಾರ್ವಜನಿಕರು ಭಾಗವಹಿಸಿದ್ದಾರೆ. ಕೃಷಿ ವಿವಿಯ ಸುಮಾರು 100 ಮಳಿಗೆಗಳನ್ನು ತೆರೆಯಲಾಗಿದೆ. ವಿವಿಯ ಹಲವು ವಿಭಾಗಗಳು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳನ್ನು ಮೇಳದಲ್ಲಿ ಪರಿಚಯಿಸಲಾಗಿತ್ತು. ಬೇಕರಿ ಉದ್ಯಮ, ಸ್ಟಾರ್ಟ್‌ಅಪ್‌ಗಳು, ನರ್ಸರಿಗಳು, ಕುರಿ, ಮೇಕೆಗಳ ವಿಭಾಗ, ಬಿತ್ತನೆ ಬೀಜ, ಸಾವಯವ ಉತ್ಪನ್ನಗಳನ್ನು ಜನರ ಗಮನ ಸೆಳೆಯಿತು. ಕೃಷಿ ವಿವಿ ವ್ಯಾಪ್ತಿಗೆ ಬರುವ ತುಮಕೂರು, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳ ಸಾಧಕ ರೈತರಿಗೆ ಮೂರು ದಿನವೂ ಪ್ರತಿದಿನ ತಲಾ ಎರಡೆರಡು ಜಿಲ್ಲೆಗಳ ರೈತರಿಗೆ ರೈತ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಯಿತು.

ರೈತರು ವೈಜ್ಞಾನಿಕವಾಗಿಯೂ ಸಿದ್ಧರಾಗಲಿ

ಇಂದಿನ ಕೃಷಿ ಕ್ಷೇತ್ರವು ಅನಿಯಮಿತ ಮಳೆ, ಬರಗಾಲ, ಅಂತರ್ಜಲ ಮಟ್ಟ ಕುಸಿತ, ಮಣ್ಣಿನ ಫಲವತ್ತತೆ ಕಡಿಮೆಯಾಗುವುದು, ಉತ್ಪಾದನಾ ವೆಚ್ಚ ಹೆಚ್ಚಳ ಹಾಗೂ ಹವಾಮಾನ ಬದಲಾವಣೆಯಂತಹ ಹಲವು ಸವಾಲು ಎದುರಿಸುತ್ತಿದೆ. ಹೀಗಾಗಿ ಸಮಸ್ಯೆ ಎದುರಾದ ಬಳಿಕ ಪರಿಹಾರ ಹುಡುಕುವುದಕ್ಕಿಂತ ಮುನ್ನೆಚ್ಚರಿಕೆಯಾಗಿ ವೈಜ್ಞಾನಿಕವಾಗಿ ಸಿದ್ಧರಾಗಬೇಕು. ಬರ ನಿರೋಧಕ ಬೆಳೆ ತಳಿಗಳ ಬಳಕೆ, ಹನಿ ನೀರಾವರಿ, ಮಳೆ ನೀರು ಸಂಗ್ರಹ, ಜಲಾನಯನ ಅಭಿವೃದ್ಧಿ, ಮಣ್ಣಿನ ತೇವಾಂಶ ಸಂರಕ್ಷಣೆ, ಬೆಳೆ ವೈವಿಧ್ಯೀಕರಣ ಹಾಗೂ ಸಮಗ್ರ ಕೃಷಿ ಪದ್ಧತಿಗಳಿಗೆ ಹೆಚ್ಚಿನ ಒತ್ತು ನೀಡಬೇಕು. ರೈತರಿಗೆ ಕೈಗೆಟುಕುವ, ಸುಲಭವಾಗಿ ಅಳವಡಿಸಿಕೊಳ್ಳಬಹುದಾದ ಹಾಗೂ ಆರ್ಥಿಕವಾಗಿ ಲಾಭದಾಯಕ ತಂತ್ರಜ್ಞಾನಗಳನ್ನು ಅಭಿವೃದ್ಧಿಪಡಿಸುವ ಅಗತ್ಯವಿದೆ ಎಂದು ಸಂಸದ ಡಾ. ಕೆ. ಸುಧಾಕರ್ ಅಭಿಪ್ರಾಯಪಟ್ಟರು.

Hosadiganta pg 10

Vijayavani pg 09

ಯುಎಎಸ್-ಬಿಗೆ ಎ ಶ್ರೇಣಿ ಮಾನ್ಯತೆ

ಬೆಂಗಳೂರು: ರಾಜ್ಯದ ಪ್ರಥಮ ಕೃಷಿ ವಿವಿ ಖ್ಯಾತಿಯ ಬೆಂಗಳೂರು ಕೃಷಿ ವಿಶ್ವವಿದ್ಯಾಲಯ (ಯುಎಎಸ್-ಬಿ) ಮುಂದಿನ 5 ವರ್ಷದ ಅವಧಿಗೆ (2031ರವರೆಗೆ) 'ಎ' ಶ್ರೇಣಿ ಮಾನ್ಯತೆಯನ್ನು ಪಡೆದುಕೊಳ್ಳುವಲ್ಲಿ ಯಶಸ್ವಿಯಾಗಿದೆ.

■ ಐಸಿಎಆರ್‌ನಿಂದ ಅಧಿಕೃತ ಮುದ್ರೆ

ನವದೆಹಲಿಯಲ್ಲಿರುವ ಭಾರತೀಯ ಕೃಷಿ ಅನುಸಂಧಾನ ಪರಿಷತ್‌ನ ರಾಷ್ಟ್ರೀಯ ಕೃಷಿ ಶಿಕ್ಷಣ ಮಾನ್ಯತಾ ಮಂಡಳಿಯ (ಐಸಿಎಆರ್-ಎನ್‌ಎಇಬಿ) ತಂಡವು ಬೆಂಗಳೂರು ಕೃಷಿ ವಿವಿಯ ವಿವಿಧ ವಿಭಾಗಗಳು, ಪ್ರಯೋಗಾಲಯ, ಪ್ರಾತ್ಯಕ್ಷಿಕೆ ತಾಕುಗಳು, ವಸತಿನಿಲಯ ಹಾಗೂ ವಿವಿಯ ಹೊರ ಆವರಣದಲ್ಲಿರುವ ಕಾಲೇಜುಗಳಿಗೆ ಭೇಟಿ ನೀಡಿ ಮಾನ್ಯತೆ ಪ್ರಮಾಣಿಸುವ ಕಾರ್ಯವನ್ನು ಇತ್ತೀಚೆಗೆ ಕೈಗೊಂಡಿತ್ತು. ಇದರ ವಿಶ್ಲೇಷಣೆಯನ್ನು ಕೈಗೊಂಡಿದ್ದ ಐಸಿಎಆರ್, ಕೃಷಿ ವಿವಿಗೆ 'ಎ' ಶ್ರೇಣಿಯನ್ನು ಮಾನ್ಯತೆಯನ್ನು ಮಂಜೂರು ಮಾಡಿದೆ. ವಿವಿಯು ಈಗಾಗಲೇ ಇದೇ ಶ್ರೇಣಿಯನ್ನು ಪಡೆದುಕೊಂಡಿತ್ತು. ಈ ಬಾರಿ 'ಎ' ಶ್ರೇಣಿಯ ಮಾನ್ಯತೆಯು ವಿವಿಯ ಎಲ್ಲ ಕಾಲೇಜುಗಳು ಹಾಗೂ ಕಾರ್ಯಕ್ರಮಗಳ ಜತೆಗೆ ಕೃಷಿ ಇಂಜಿನಿಯರಿಂಗ್ ಮಹಾವಿದ್ಯಾಲಯಕ್ಕೂ ಐಸಿಎಆರ್ ಮಾನ್ಯತೆ ದೊರೆತಿದೆ ಎಂದು ವಿವಿಯ ಪ್ರಭಾರ ಕುಲಪತಿ ಡಾ. ಪಿ. ವೆಂಕಟರಮಣ ತಿಳಿಸಿದ್ದಾರೆ.

3 ದಿನಗಳಲ್ಲಿ ಮೇಳಕ್ಕೆ 9 ಲಕ್ಷ ಮಂದಿ ಭೇಟಿ | ಕೃಷಿ ತಂತ್ರಜ್ಞಾನಗಳ ಅನಾವರಣ | ಸಾಧಕ ರೈತರಿಗೆ ಗೌರವ

ಜಿಕೆವಿಕೆ ಕೃಷಿ ಕಲರವಕ್ಕೆ ವಿಧ್ಯುಕ್ತ ತೆರೆ

■ ವಿಕ ಸುದ್ದಿಲೋಕ ಬೆಂಗಳೂರು

ಮೂರು ದಿನಗಳ ಕಾಲ ಗಾಂಧಿ ಕೃಷಿ ವಿಜ್ಞಾನ ಕೇಂದ್ರ (ಜಿಕೆವಿಕೆ)ದಲ್ಲಿ ನಡೆದ ಕೃಷಿ ಮೇಳಕ್ಕೆ ಬುಧವಾರ ತೆರೆ ಬಿತ್ತು.

ಬರದ ಹಿನ್ನೆಲೆಯಲ್ಲಿ ಈ ಬಾರಿ ಸರಳವಾಗಿ ಕೃಷಿ ಮೇಳ ಆಯೋಜಿಸಲಾಗಿತ್ತು. ಪ್ರತಿ ಬಾರಿಯೂ ವಾರಾಂತ್ಯ ಬರುವಂತೆ ನೋಡಿಕೊಂಡು ಮೇಳ ಆಯೋಜಿಸಲಾಗುತ್ತಿತ್ತು. ಆದರೆ, ಈ ಬಾರಿ ವಾರದ ದಿನಗಳಲ್ಲೇ ನಡೆಸಲಾಯಿತು. ಹೀಗಿದ್ದರೂ ಸುಮಾರು 9 ಲಕ್ಷಕ್ಕೂ ಹೆಚ್ಚು ಮಂದಿ ಭೇಟಿ ನೀಡಿದ್ದಾರೆ. ಕೃಷಿ ವಿವಿಯ ಸುಮಾರು 100 ಮಳಿಗೆಗಳನ್ನು ತೆರೆಯಲಾಗಿದ್ದು, ವಿವಿಯ ನಾನಾ ವಿಭಾಗಗಳು ಅಭಿವೃದ್ಧಿಪಡಿಸಿರುವ ತಂತ್ರಜ್ಞಾನಗಳನ್ನು ಮೇಳದಲ್ಲಿ ಪರಿಚಯಿಸಲಾಯಿತು.

ಪ್ರತಿ ಬಾರಿಯೂ ಮೇಳದ ಸಂದರ್ಭದಲ್ಲಿ ಮಳೆ ಬರುತ್ತಿತ್ತು. ಇದರಿಂದ ನೋಡುಗರು ಮತ್ತು ಮಳಿಗೆದಾರರಿಗೆ ತುಂಬಾ ಕಿರಿಕಿರಿಯೆನಿಸುತ್ತಿತ್ತು. ಆದರೆ, ಈ ಬಾರಿ ಮಳೆಯರಲಿಲ್ಲ. ಆದರೂ ದೂರದ ಊರುಗಳಿಂದ ಬಂದ ರೈತರು ಹೊಸ ತಂತ್ರಜ್ಞಾನ, ಯಂತ್ರೋಪಕರಣಗಳಲ್ಲದೆ ಮೇಳ ಮಾಡುವ ಅಗತ್ಯವಿರಲಿಲ್ಲವೆಂದು ಬೇಸರ ವ್ಯಕ್ತಪಡಿಸಿದರು.

ಬೇಕರಿ ಉದ್ಯಮ, ಸ್ಟಾರ್ಟ್‌ಪ್‌ಗಳು, ನರ್ಸರಿಗಳು, ತಾಕುಗಳು, ಕುರಿ, ಮೇಕೆಗಳ ವಿಭಾಗ, ಬಿತ್ತನೆ ಬೀಜ, ಸಾವಯವ ಉತ್ಪನ್ನಗಳು ಹೀಗೆ ಕೃಷಿಗೆ ಸಂಬಂಧಿಸಿದ ಎಲ್ಲವನ್ನೂ ವೀಕ್ಷಿಸಿ, ಸಂಭ್ರಮಿಸಿದರು. ಶಾಲಾ ಮಕ್ಕಳು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿದ್ದರು. ಜಿಕೆವಿಕೆ ಅಭಿವೃದ್ಧಿಪಡಿಸಿರುವ ರೆಡ್ ಜಾಕ್ ಎಂಬ ಹಲಸಿನ ಸಸಿಗಳನ್ನು ರೈತರು ಖರೀದಿಸಿದರು.

ಸಮಾರೋಪದಲ್ಲಿ ಸಾಧಕ ರೈತರು ಹಾಗೂ ವಿವಿಯ ನಾನಾ ಸಿಬ್ಬಂದಿಯನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿ ಹಂಗಾಮಿ ಕುಲಪತಿ ಪಿ. ವೆಂಕಟರವಣ, ಕುಲಸಚಿವ ಕೆ.ಮಧುಸೂದನ್, ಸಂಶೋಧನಾ ಮಂಡಳಿ ನಿರ್ದೇಶಕ ಮೂಡಲಗಿರಿಯಪ್ಪ, ವಿಸ್ತರಣಾ ನಿರ್ದೇಶಕ ಕೆ.ಪಿ. ರಘುಪ್ರಸಾದ್, ಸ್ನಾತಕೋತ್ತರ ಡೀನ್ ಎನ್.ನಟರಾಜ ಕರಬ ಮತ್ತಿತರರು ಉಪಸ್ಥಿತರಿದ್ದರು.



ಅಡಕೆ ಸಿಪ್ಪೆಯಿಂದ ಹಲಗೆ

ಟಿಟ್ರಾಪ್ಯಾಕ್, ಅಡಕೆ ಕಾಯಿ ಸಿಪ್ಪೆ, ಭತ್ತದ ಹುಲ್ಲು, ಜೊಳ್ಳು ಭತ್ತ ಮತ್ತಿತರ ನಿರುಪಯುಕ್ತ ಹಾಗೂ ತ್ಯಾಜ್ಯ ವಸ್ತುಗಳಿಂದ ಛಾವಣಿ ಹಲಗೆ, ಗೋಡೆ ಹಲಗೆ, ಮೇಜು ತಯಾರಿಸುವ ಮೂಲಕ ಕೃಷಿ ವಿವಿ ವನ ವಿಜ್ಞಾನ ಕೇಂದ್ರ ಕೃಷಿ ಮೇಳದಲ್ಲಿ ಗಮನಸೆಳೆಯಿತು. ಎಸೆದ ವಸ್ತುವಿನಿಂದಲೇ ಛಾವಣಿ ಹಲಗೆ, ಗೋಡೆ ಹಲಗೆ, ಮೇಜು ತಯಾರಿಯೊಂದಿಗೆ ರೈತರಿಗೆ ಹೊಸ ಆದಾಯದ ದಾರಿ ಇದಾಗಿದೆ. ಮನೆ ಕಟ್ಟಲು, ಪೀಠೋಪಕರಣ ಮಾಡಲು, ರೂಫ್‌ನ ಅಲಂಕಾರ, ಮೇಲ್ಛಾವಣಿಗೆ ಅಲಂಕಾರಿಕ ಗೋಡೆ ನಿರ್ಮಾಣ ಇತ್ಯಾದಿಗಳಿಗೆ ಈ ನಿರುಪಯುಕ್ತ ವಸ್ತುಗಳ ಹಲಗೆಯು ಬಳಕೆಯಾಗಲಿದೆ. ಇದರಿಂದ ಹಣವೂ ಉಳಿಯುತ್ತದೆ. ದೀರ್ಘ ಬಾಳಿಕೆಯೂ ಬರುತ್ತದೆ ಎಂದು ವನ ವಿಜ್ಞಾನ ಕೇಂದ್ರದ ಪ್ರಾಧ್ಯಾಪಕರಾದ ಎಚ್.ಬಿ. ರಫು ತಿಳಿಸಿದರು.

ಕುಸುನಾಡಿನ ಕಕೂನ್ ಹಾರಗಳಿಗೆ ಆಂಧ್ರದಲ್ಲಿ ಬೇಡಿಕೆ: ಕರ್ನಾಟಕದ ರೇಷ್ಮೆ ಗೂಡುಗಳಿಂದ ತಯಾರಿಸಿದ ಹಾರಗಳು ಆಂಧ್ರ ಪ್ರದೇಶ ಹಾಗೂ ಇತರೆ ರಾಜ್ಯಗಳಲ್ಲಿ ಮದುವೆ ಮತ್ತಿತರ ಶುಭ ಕಾರ್ಯಗಳಿಗೆ ಹೆಚ್ಚು ಬೇಡಿಕೆ ಪಡೆದಿವೆ. ಗ್ರಾಹಕ ಸ್ನೇಹಿ ಹಾರಗಳಿಗೆ 100 ರೂ. ನಿಂದ 5 ಸಾವಿರ ರೂ.ವರೆಗೆ ಬೆಲೆಯಿದೆ. ಡ್ರೆಸ್‌ಗೆ ಸರಿಹೊಂದುವಂತೆ ಬೇಕಾದ ವಿನ್ಯಾಸ ಮತ್ತು ಬಣ್ಣದಲ್ಲಿ ರೇಷ್ಮೆ ಗೂಡಿನ ಹಾರಗಳನ್ನು ತಯಾರಿಸಿಕೊಡಲಾಗುವುದು ಎಂದು ರೇಷ್ಮೆ ಇಲಾಖೆಯ ಅಧಿಕಾರಿ ಪಲ್ಲವಿ ತಿಳಿಸಿದರು.

'ವೈಜ್ಞಾನಿಕ ಕೃಷಿ ಪದ್ಧತಿ ಅನುಸರಿಸಿ'



ಬೆಂಗಳೂರು: ''ಸಮಸ್ಯೆ ಎದುರಾದ ನಂತರ ಪರಿಹಾರ ಹುಡುಕುವ ಬದಲು, ಮುನ್ಸೆಚ್ಚರಿಕೆಯಾಗಿ ವೈಜ್ಞಾನಿಕ ಕೃಷಿ ಪದ್ಧತಿ ಮತ್ತು ಬರ ನಿರೋಧಕ ತಳಿ ಬಳಸಿಕೊಳ್ಳಬೇಕು'' ಎಂದು ಸಂಸದ ಡಾ.ಕೆ. ಸುಧಾಕರ್ ರೈತರಿಗೆ ಕರೆ ನೀಡಿದರು.

ನಗರದ ಜಿಕೆವಿಕೆ ಆವರಣದಲ್ಲಿ ಆಯೋಜಿಸಲಾಗಿದ್ದ 'ಕೃಷಿ ಮೇಳ-2026'ರ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬುಧವಾರ ಅವರು ಮಾತನಾಡಿದರು.

''ಇಂದಿನ ಕೃಷಿ ಕ್ಷೇತ್ರವು ಅನಿಯಮಿತ ಮಳೆ, ದೀರ್ಘಕಾಲದ ಒಣಹವೆ, ಅಂತರ್ಜಲ ಕುಸಿತ ಹಾಗೂ ಮಣ್ಣಿನ ಫಲವತ್ತತೆ ಕುಂಠಿತಗೊಳ್ಳುವ ಗಂಭೀರ ಸವಾಲುಗಳನ್ನು ಎದುರಿಸುತ್ತಿದೆ. ಇಂತಹ ಸಂದರ್ಭದಲ್ಲಿ ಕೃಷಿ ಮೇಳದಲ್ಲಿ ಎಲ್‌ನಿನೋ ಪರಿಣಾಮಗಳಕುರಿತುತಜ್ಞರವಿಚಾರಸಂಕಿರಣಗಳನ್ನು ಆಯೋಜಿಸಿರುವುದು ಸಮಯೋಚಿತವಾಗಿದೆ. ಕೃಷಿ ಎಂದರೆ ಕೇವಲ ಉದ್ಯೋಗವಲ್ಲ, ಅದು ದೇಶದ ಆರ್ಥಿಕತೆಯ ಆಧಾರಸ್ತಂಭ. ಆಹಾರ ಭದ್ರತೆಯ ಜೀವನಾಡಿ ಹಾಗೂ ಗ್ರಾಮೀಣ ಭಾರತದ ಬದುಕಿನ ಮೂಲಾಧಾರ. ಹೀಗಾಗಿ ರೈತರಿಗೆ ಎಲ್ಲಾ ರೀತಿಯ ಆಗತ್ಯ ನೆರವು ನೀಡಬೇಕು,'' ಎಂದರು.

ರೈತರಿಗೆ ಸಂಸದ ಡಾ.ಕೆ. ಸುಧಾಕರ್ ಕರೆ

''ಕೃಷಿ ಕ್ಷೇತ್ರದಲ್ಲಿ ಯುವಜನತೆಯ ಭಾಗವಹಿಸುವಿಕೆ ಹೆಚ್ಚಾಗಬೇಕು. ಆಹಾರ ಸಂಸ್ಕರಣೆ, ಮೌಲ್ಯವರ್ಧನೆ, ಡಿಜಿಟಲ್ ಕೃಷಿ, ನಿಖರ ಕೃಷಿ ಹಾಗೂ ಕೃಷಿ ಆಧಾರಿತ ಸ್ಟಾರ್ಟ್‌ಪ್‌ಗಳ ಮೂಲಕ ಯುವ ಸಮುದಾಯಕ್ಕೆ ಕೃಷಿ ಕ್ಷೇತ್ರದಲ್ಲಿ ಅಪಾರ ಅವಕಾಶಗಳಿವೆ,'' ಎಂದು ಅವರು ತಿಳಿಸಿದರು.

ಕಾರ್ಯಕ್ರಮದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದ ಪ್ರಗತಿಪರ ರೈತರು ಮತ್ತು ರೈತ ಮಹಿಳೆಯರ ಸಾಧನೆಯನ್ನು ಗುರುತಿಸಿ ಸನ್ಮಾನಿಸಲಾಯಿತು. ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ. ಪಿ. ವೆಂಕಟರವಣ ಅಧ್ಯಕ್ಷತೆ ವಹಿಸಿದ್ದರು.

V-karnataka pg 05

Hosadiganta Pg 10

ಕೃಷಿ ಮೇಳದಲ್ಲಿ ಮಾಹಿತಿ ಸಂಗ್ರಹ

• ಹೊಸಕೋಟೆ: ಬರಗಾಲದ ಸನ್ನಿವೇಶವನ್ನು ಸಮರ್ಥವಾಗಿ ಎದುರಿಸಲು ಮತ್ತು ಪರ್ಯಾಯ ಕೃಷಿ ತಂತ್ರಜ್ಞಾನಗಳ ಕುರಿತು ಪ್ರಾಯೋಗಿಕ ಮಾಹಿತಿ ಪಡೆಯುವ ನಿಟ್ಟಿನಲ್ಲಿ, ಹೊಸಕೋಟೆ ತಾಲೂಕಿನ ರೈತರಿಗಾಗಿ ಬೆಂಗಳೂರಿನ ಜಿಕೆವಿಕೆ ಕೃಷಿ ಮೇಳಕ್ಕೆ ಅಧ್ಯಯನ ಪ್ರವಾಸವನ್ನು ಆಯೋಜಿಸಲಾಗಿತ್ತು.

ರಾಜ್ಯದಲ್ಲಿ ತಲೆದೋರಿರುವ ಬರಗಾಲ ಪರಿಸ್ಥಿತಿಯಿಂದಾಗಿ ಬೆಂಗಳೂರು ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಕೃಷಿ ಚಟುವಟಿಕೆಗಳಿಗೆ ತೀವ್ರ ಹಿನ್ನಡೆಯಾಗಿದೆ. ಜಿಲ್ಲೆಗಳ ಮಳೆ ಮತ್ತು ಬೆಳೆ ಪರಿಸ್ಥಿತಿಯನ್ನು ಕೂಲಂಕಷವಾಗಿ ಅವಲೋಕಿಸಿ, ಸರ್ಕಾರದ ಅನುಮತಿಯೊಂದಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ನವೆಂಬರ್ 16ರಿಂದ 18ರವರೆಗೆ ಜಿ.ಕೆ.ವಿ.ಕೆ ಆವರಣದಲ್ಲಿ ಕೃಷಿ ಮೇಳವನ್ನು ಹಮ್ಮಿಕೊಂಡಿದೆ. ಒಣ ಭೂಮಿ ಬೇಸಾಯ ಕ್ರಮಗಳು, ಇತ್ತೀಚೆಗೆ ಬಿಡುಗಡೆಯಾದ ನೂತನ ತಳಿ ತಂತ್ರಜ್ಞಾನಗಳ ಪ್ರಾತ್ಯಕ್ಷಿಕೆ, ಕೃಷಿಯಲ್ಲಿ 'ಎಲ್ ನಿನೋ' ಪರಿಣಾಮಗಳು, ಪೂರಕ ಸಿದ್ಧತೆಗಳು, ಬರಗಾಲಕ್ಕೆ ಪರ್ಯಾಯ ತಂತ್ರಜ್ಞಾನಗಳ ಕುರಿತ ತಾಂತ್ರಿಕ ಕಾರ್ಯಾಗಾರ ಹಾಗೂ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಆಯೋಜಿಸಲಾಗಿದೆ. ಈ ಮೇಳದ ಪ್ರಯೋಜನವನ್ನು ಸ್ಥಳೀಯ ರೈತರಿಗೆ ತಲುಪಿಸುವ ಉದ್ದೇಶದಿಂದ ಹೊಸಕೋಟೆ ತಾಲ್ಲೂಕಿನ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ ಹಾಗೂ ಕೃಷಿ ಇಲಾಖೆಯ ಸಹಯೋಗದೊಂದಿಗೆ, ಕೇಂದ್ರ ಪುರಸ್ಕೃತ 'ಆತ್ಮ' ಯೋಜನೆಯಲ್ಲಿ ಈ ಅಧ್ಯಯನ ಪ್ರವಾಸವನ್ನು ಏರ್ಪಡಿಸಲಾಗಿತ್ತು. ಹೊಸಕೋಟೆಯ ಪಶು ವೈದ್ಯಕೀಯ ಇಲಾಖೆಯ ಆವರಣದಲ್ಲಿ ಡಾ ಮಂಜುನಾಥ್ ಅಧ್ಯಯನ ಪ್ರವಾಸಕ್ಕೆ ಅಽಕೃತ ಚಾಲನೆ ನೀಡಿದರು. ಹೊಸಕೋಟೆ ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆಯ ಮುಖ್ಯ ಆಡಳಿತಾಽಕಾರಿಗಳು, ಸಹಾಯಕ ಕೃಷಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರು ಹಾಗೂ ಆತ್ಮ ಯೋಜನೆಯ ತಾಂತ್ರಿಕ ವ್ಯವಸ್ಥಾಪಕರು ಉಪಸ್ಥಿತರಿದ್ದರು. ತಾಲೂಕಿನ ವಿವಿಧ ಭಾಗಗಳ ಪ್ರಗತಿಪರ ರೈತರು ಹಾಗೂ ರೈತ ಮಹಿಳೆಯರು ಅಧ್ಯಯನ ಪ್ರವಾಸದಲ್ಲಿ ಉತ್ಸಾಹದಿಂದ ಪಾಲ್ಗೊಂಡಿದ್ದರು.

Udayavani Pg 09


ಕೃಷಿ ಮೇಳಕ್ಕೆ ಅದ್ಧೂರಿ ತೆರೆ: 3 ದಿನದಲ್ಲಿ 9.1 ಲಕ್ಷ ಜನ ಭೇಟಿ

ಕೃಷಿ ಪರಿಕರಗಳ ಖರೀದಿ ಭರಾಟೆ ಜೋರು | ಮಾದರಿ ಬೆಳೆಗಳ ಮಾಹಿತಿ ಪಡೆದ ರೈತರು

■ ಉದಯವಾಣಿ ಸಮಾಚಾರ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯದಲ್ಲಿ ನಡೆದ 3 ದಿನಗಳ ಕೃಷಿಮೇಳ-2026ಕ್ಕೆ ಬುಧವಾರ ಅದ್ಧೂರಿ ತೆರೆ ಬಿದ್ದಿದೆ. ಕಳೆದ 3 ದಿನಗಳಲ್ಲಿ ಒಟ್ಟು 9.10 ಲಕ್ಷ ಮಂದಿ ಭೇಟಿ ನೀಡಿದ್ದಾರೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬುಧವಾರ ಕೃಷಿ ಮೇಳಕ್ಕೆ ಆಗಮಿಸಿದ್ದ ರೈತರು ಅಲ್ಲಿ ಪ್ರದರ್ಶನಕ್ಕಿಟ್ಟಿದ್ದ ಮಾದರಿ ಬೆಳೆಗಳನ್ನು ವೀಕ್ಷಿಸಿ ವಿಜ್ಞಾನಿಗಳಿಂದ ಮಾಹಿತಿ ಪಡೆದುಕೊಂಡರು. ನೂರಾರು ಮಳಿಗೆಗಳಲ್ಲಿ ಮಾರಾಟಕ್ಕಿಟ್ಟಿದ್ದ ಕೃಷಿ ಪರಿಕರಗಳ ಖರೀದಿ ಭರಾಟೆಯೂ ಜೋರಾಗಿತ್ತು. ಸಾವಿರಾರು ಮಂದಿ ಶಾಲಾ ಮಕ್ಕಳು ಆಗಮಿಸಿ, ಕೃಷಿ ಸಂಶೋಧನೆಗಳನ್ನು ವೀಕ್ಷಿಸಿದರು. ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಾಧಕ ರೈತರನ್ನು ಸನ್ಮಾನಿಸಲಾಯಿತು. 4 ರೈತರಿಗೆ ಜಿಲ್ಲಾ ಮಟ್ಟದ ಪ್ರಗತಿಪರ ರೈತ ಮತ್ತು ರೈತ ಮಹಿಳೆ ಪ್ರಶಸ್ತಿ, ಹಾಗೂ 38 ಮಂದಿ ರೈತರಿಗೆ ತಾಲೂಕು ಮಟ್ಟದ ಪ್ರಗತಿಪರ ಯುವ ರೈತ ಮತ್ತು ಯುವ ರೈತ ಮಹಿಳೆ ಪ್ರಶಸ್ತಿ ನೀಡಲಾಯಿತು.


ಕೃಷಿಮೇಳದ ಕೊನೇ ದಿನ ಲಕ್ಷಾಂತರ ಜನರು ಪಾಲ್ಗೊಂಡಿದ್ದರು.

ಕೃಷಿ ಕ್ಷೇತ್ರಕ್ಕೆ ಅನೇಕ ಸವಾಲು: ಸಂಸದ ಡಾ.ಕೆ.ಸುಧಾಕರ್‌ನೆರೆದಿದ್ದ ಸಭೀಕರನ್ನು ಉದ್ದೇಶಿಸಿ ಮಾತನಾಡಿ, ಇಂದು ಕೃಷಿ ಎಂದರೆ ಕೇವಲ ಸಾಂಪ್ರದಾಯಿಕ ಬೆಳೆ ಬೆಳೆಯುವುದಕ್ಕೆ ಸೀಮಿತವಾಗಿಲ್ಲ. ಆಹಾರ ಸಂಸ್ಕರಣೆ, ಮೌಲ್ಯವರ್ಧನೆ, ಬೀಜೋತ್ಪಾದನೆ, ಆಧುನಿಕ ಕೃಷಿ ಯಂತ್ರೋಪಕರಣಗಳು, ನಿಖರ ಕೃಷಿ, ಡಿಜಿಟಲ್ ಕೃಷಿ, ಕೃಷಿ ಉದ್ಯಮಶೀಲತೆ ಮತ್ತು ಕೃಷಿ ಆಧಾರಿತ ಸ್ಟಾರ್ಟ್‌ಅಪ್‌ಗಳ ಮೂಲಕ ಯುವಜನತೆಗೆ ಅಪಾರ ಅವಕಾಶಗಳಿವೆ ಎಂದು ತಿಳಿಸಿದರು.

ಕಡೇ ದಿನ 4.9 ಲಕ್ಷ ಮಂದಿ ಭೇಟಿ

ನ.16ರಂದು ಮೊದಲ ದಿನ 1.1 ಲಕ್ಷ ಮಂದಿ, ನ.17ರಂದು 2ನೇ ದಿನ 3.1 ಲಕ್ಷ ಮಂದಿ, 3ನೇ ದಿನವಾದ ಬುಧವಾರ (ನ.18) 4.9 ಲಕ್ಷ ಮಂದಿ ಭೇಟಿ ಕೊಟ್ಟಿದ್ದಾರೆ. 3 ದಿನಗಳಲ್ಲಿ ಒಟ್ಟು 9.10 ಲಕ್ಷ ಮಂದಿ ಕೃಷಿಮೇಳಕ್ಕೆ ಭೇಟಿಕೊಟ್ಟರುವುದಾಗಿ ಜಿಕೆ-ವಿಕೆ ಮೂಲಗಳು ತಿಳಿಸಿವೆ.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಆಯುಕ್ತ ಡಾ.ಸತೀಶ್, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಪಿ.ವೆಂಕಟರವಣ, ಕೃಷಿ ವಿವಿ ವ್ಯವಸ್ಥಾಪನಾ ಮಂಡಳಿ ಸದಸ್ಯ ನವೀನ್ ಇತರರಿದ್ದರು.

Krishi Mela records footfall of only 9.1 lakh this year

The Hindu Bureau
BENGALURU

Only 9.1 lakh people and farmers attended the Krishi Mela, organised by the University of Agriculture Sciences, Bengaluru (UAS-B), on the Gandhi Krishi Vigyan Kendra campus from November 16 to 18. This is the lowest footfall as against the turnout in 2023, 2024 and 2025. Last year, the mela, which spanned four days, saw over 54 lakh attendees, breaking the previous years' records: 34.13 lakh in 2024 and 15.6 lakh in 2023.

Last year, 600 stalls had been installed to educate farmers on technology, seeds and other purposes but this year, there were only 150. According to sources from UAS-B, the budget allocated for the same was limited due to drought conditions across the State. It was planned as a single-day event but stretched to three days, in the eleventh hour. Besides, this year's mela was organised on week days, contrary to last year.



The mela was initially planned as a single-day event but stretched to three days, in the eleventh hour. ANI

According UAS-B sources, the budget for the mela was limited due to drought conditions

The recent Krishi Mela organised by UAS, Dharwad, had recorded a 26-lakh footfall, the highest since 2016.

Accreditation

The UAS-B has been accredited with Grade A by the National Agricultural Education Accreditation Board (NAEAB). P. Venkataravana, Vice-Chancellor, said, "It is a matter of pride for us as all the students, researchers and faculty worked hard to meet the criteria set by NAEAB to earn this accreditation."

Hindu pg 07



ವ್ಯಗತಿವರ ರೈತರಿಗೆ ಸಂಸದ ಕೆ.ಸುಧಾಕರ್ ಪ್ರಶಸ್ತಿ ಪ್ರದಾನ ಮಾಡಿದರು

ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳ ರೈತರಿಗೆ ಗೌರವ

ಪ್ರಶಸ್ತಿ ಪಡೆದ ರೈತರ ಸಂಭ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿಮೇಳದ ಸಮಾರೋಪದಲ್ಲಿ ಸಂಸದ ಡಾ.ಕೆ.ಸುಧಾಕರ್ ಅವರು ಕೋಲಾರ ಹಾಗೂ ಚಿಕ್ಕಬಳ್ಳಾಪುರದ ಪ್ರಗತಿಪರ ರೈತರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು.

ನಂತರ ಮಾತನಾಡಿ, 'ಕೃಷಿ ಕ್ಷೇತ್ರವು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅನಿಯಮಿತ ಮಳೆ, ದೀರ್ಘಕಾಲದ ಒಣ ಹವೆ, ಬರಗಾಲ, ಅಂತರ್ಜಲ ಮಟ್ಟ ಕುಸಿತವಾಗಿದೆ. ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳವಾಗಿದೆ. ಈ ವೇಳೆ ಕೃಷಿ ಮೇಳವು ಬರ ನಿರ್ವಹಣಾ ತಂತ್ರಜ್ಞಾನಗಳನ್ನು ಪರಿಚಯಿಸಿರುವುದು ಶ್ಲಾಘನೀಯ' ಎಂದರು.

ಕೃಷಿ ಇಲಾಖೆ ಆಯುಕ್ತ ಬಿ.ಸಿ.ಸತೀಶ್, ಕುಲಪತಿ ಪಿ.ವೆಂಕಟರಮಣ, ಕುಲಸಚಿವ ಕೆ.ಮಧುಸೂದನ್, ವ್ಯವಸ್ಥಾಪನಾ ಮಂಡಳಿ ಸದಸ್ಯರಾದ ಎಂ.ಒ.ನವೀನ್, ಕೆ.ಎಸ್.ರಾಜಶೇಖರಪ್ಪ, ಸಂಶೋಧನಾ ಮಂಡಳಿ ನಿರ್ದೇಶಕ ಮೂಡಲಗಿರಿಯಪ್ಪ, ವಿಸ್ತರಣಾ ನಿರ್ದೇಶಕ ಕೆ.ಪಿ.ರಘುಪ್ರಸಾದ್, ಸ್ನಾತಕೋತ್ತರ ಡೀನ್ ವೈ.ಎನ್. ಎನ್.ನಟರಾಜ ಕರಬ, ಕೃಷಿ ವಿಭಾಗದ ಡೀನ್ ವೈ.ಎನ್. ಶಿವಲಿಂಗಯ್ಯ ಪಾಲ್ಗೊಂಡಿದ್ದರು.

ಪ್ರಶಸ್ತಿ ಪಡೆದವರು: ಚಿಕ್ಕಬಳ್ಳಾಪುರದ ಬಾಗೇಪಲ್ಲಿ ತಾಲ್ಲೂಕಿನ ಮಮ್ಮಡಿವಾರಿಪಲ್ಲಿ ಗ್ರಾಮದ ಹರಿನಾಥ್ ರೆಡ್ಡಿ, ಚಿಂತಾಮಣಿ ತಾಲ್ಲೂಕಿನ ಹನುಮ್ಮಗಾರನಹಳ್ಳಿಯ ಸಿ.ಕೆ.ಉಮಾ, ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ ವಿ.ನರಸಿಂಹರಡ್ಡಿ, ಕೋಲಾರ ತಾಲ್ಲೂಕಿನ ಚಿಟ್ಟಹಳ್ಳಿಯ ಆರ್.ಕೃಪಾ ಅವರು ಜಿಲ್ಲಾಮಟ್ಟದ ಪ್ರಗತಿಪರ ರೈತ ಹಾಗೂ ರೈತ ಮಹಿಳಾ ಪ್ರಶಸ್ತಿಗೆ ಭಾಜನರಾದರು.

ತಾಲ್ಲೂಕು ಮಟ್ಟದ ಯುವ ರೈತ, ಯುವ ರೈತ ಮಹಿಳೆ ಪ್ರಶಸ್ತಿ ನೀಡಲಾಯಿತು.

- **ಬಾಗೇಪಲ್ಲಿ:** ಜಿ.ಎಸ್.ವೆಂಕಟೇಶ (ಗುಂಟಿಗಾನಹಳ್ಳಿ), ಪಿ. ದೀಪಾ (ಮೊಟಕಪಲ್ಲಿ)
- **ಚೇಳೂರು:** ಎ.ವಿ.ಮಹೇಶ್ (ಚೌಡಂಪಲ್ಲಿ), ಎಲ್. ಗಾಯಿತ್ರಿ (ರಾಗಿಮ್ಮಾಕಲಪಲ್ಲಿ)
- **ಚಿಕ್ಕಬಳ್ಳಾಪುರ:** ಶಬರೀಶ (ಪಿಲ್ಲಗುಂಡ್ಲಹಳ್ಳಿ), ಕೆ.ವಿ. ಸುಷ್ಮಾ (ಯಲುವಳ್ಳಿ)
- **ಚಿಂತಾಮಣಿ:** ಎಲ್.ಎನ್.ಉದಯ್ (ನಂದಗಾನಹಳ್ಳಿ), ಎಂ. ಅನುಷಾ (ಅತ್ತೂರು)
- **ಗೌರಿಬಿದನೂರು:** ಎಚ್.ಸತೀಶ್‌ಕುಮಾರ್ (ಹುದುತಿ), ಸಿ.ಎನ್.ನೇವಂತಿ (ಕಾಚಮಾಚೇನಹಳ್ಳಿ)
- **ಗುಡಿಬಂಡೆ:** ಮಲ್ಲಿಕಾರ್ಜುನ ರೆಡ್ಡಿ (ಬೌಚಕುಂಟನಹಳ್ಳಿ), ಎ.ಎಚ್.ಅಶ್ವಿನಿ (ಪೆಮ್ಮನಹಳ್ಳಿ)
- **ಮಂಚೇನಹಳ್ಳಿ:** ಜಿ.ಕೆ.ಮೋಹನ್ (ಮಂಚೇನಹಳ್ಳಿ), ಜೆ.ಎಲ್.ನಯನಾ (ಕನಗಾನಕೊಪ್ಪ)
- **ಶಿಡ್ಲಘಟ್ಟ:** ಕೆ.ಎನ್.ಕೌಶಿಕ್ (ಕೊತ್ತನೂರು), ವಿ.ರಮ್ಯಾ (ಕಾಚಹಳ್ಳಿ)
- **ಬಂಗಾರಪೇಟೆ:** ಆರ್.ರಾಜರೆಡ್ಡಿ (ಚಂಬೇನಹಳ್ಳಿ), ಡಿ.ಎನ್.ಸುಷ್ಮಿತಾ (ಮಾಗೇರಿ)
- **ಕೋಲಾರ:** ಆರ್.ಚೇತನ್ (ಚೆಲುವನಹಳ್ಳಿ), ಸಿ.ಪಲ್ಲವಿ (ತೊಟ್ಲಿ)
- **ಕೆ.ಜಿ.ಎಫ್:** ಕೆ.ಎಂ.ನವೀನ (ಕಳ್ಳಿಕುಪ್ಪ), ಎಸ್. ಸೌಂದರ್ಯಾ (ಕಟ್ಟಕುಂಟೆ)
- **ಮಾಲೂರು:** ವಿ.ಅಂಬರೀಶ್ (ಉಪ್ಪಾರಹಳ್ಳಿ), ಡಿ.ಸುಷ್ಮಾ (ದ್ಯಾಪಸಂದ್ರ)
- **ಮುಳಬಾಗಿಲು:** ಕೆ.ಜೆ.ತಿಲಕ್ ರೆಡ್ಡಿ (ಸೋಮರಸನಹಳ್ಳಿ), ಎನ್.ಎಚ್.ಚಾಂದಿನಿ (ರಾಜೇಂದ್ರಹಳ್ಳಿ)
- **ಶ್ರೀನಿವಾಸಪುರ:** ಜಿ.ವಿ.ಶಿವಕುಮಾರ್ (ಗೌನಿಪಲ್ಲಿ), ಕೆ.ಎನ್.ಮೇಘನಾ (ವಳಗೇರನಹಳ್ಳಿ)

Prajavani Pg 07



Chikkaballapur MP Dr K Sudhakar presents awards to progressive farmers during the valedictory ceremony of Krishi Mela-2026 at GKVK, Bengaluru on Wednesday.

Dec Hrd Pg 05



Farmers and visitors throng the agriculture fair.

Krishi Mela-2026 concludes; three-day fair registers 9.1 lakh footfalls

MP stresses need to take farm technology to farmers in arid districts

BENGALURU, DHNS

The three-day Krishi Mela-2026, organised by the University of Agricultural Sciences, Bangalore at GKVK concluded on Wednesday; more than 9.1 lakh farmers and visitors participated in and attended the fair.

According to the university, while 1.1 lakh visited the fair on the first day, the second day registered an attendance of 3.1 lakh, before being surpassed by 4.9 lakh on the final day.

Addressing the gathering, Chikkaballapur MP Dr K Sudhakar highlighted the need to equip farmers in arid districts such as Chikkaballapur with the varsity's innovations. He also stressed the need to increase participation of youngsters in agriculture, and spoke on the need to promote precision farming, digital agriculture and agri-startups.

Tackling pests

Awards for Kolar and Chikkaballapur progressive farmers and farm women were presented, as were taluk-level prizes, on the occasion.

The mela drew considerable public attention with its unique exhibition on insects, highlighting their role in agriculture, crop protection and the food chain.

Speaking at the mela, Prof Rajendra explained that farmers needed to move away from excessive dependence on chemical pesticides and adopt Integrated Pest Management (IPM) practices.

Tomato, maize and several flowering crops were particularly vulnerable to insect attacks. In regions such as Kolar, Chikkaballapur, Mysuru and Bengaluru Rural, farmers often lost their crops to pests that attacked roots, leaves, flowers and fruits, he said.

Among the preventive agricultural practices that farmers could adopt was growing maize as a barrier crop around their tomato fields, he said. This helps restrict the movement of certain pests, including fruit borers and pinworms, from one field to another.

Officials said adopting integrated methods could reduce cultivation costs while ensuring effective pest control.

Insect-based delicacies turned heads

Another major attraction at the Krishi Mela was a food display featuring dishes prepared using edible insects, including grasshopper kebabs, mealworm fried rice and mealworm pizza.

The initiative sought to familiarise visitors with the nutritional potential of insects, particularly as an alternative source of protein. The display attracted curious visitors keen to learn how insects could be incorporated into their cuisines.

Manjunath, a professor at GKVK, said insect consumption was not entirely new to Indian food traditions. Several communities have historically consumed insects such as red ants, termites, grubs, honeybee larvae and eggs, he said.

He pointed out that while India had a rich culinary culture, the nutritional potential of edible insects remained largely unexplored. "Insects can be consumed after appropriate processing and preparation. They offer an alternative source of protein," Manjunath said.

ಕೃಷಿ ಮೇಳಕ್ಕೆ ತೆರೆ: 9 ಲಕ್ಷ ಮಂದಿ ಭೇಟಿ

ಕಡೇ ದಿನ 4.90 ಲಕ್ಷ ಜನ: ಮುಂದಿನ ಮುಂಗಾರಿಗೆ ಭರ್ಜರಿ ಇಳುವರಿಯ ಕನಸು

• ಮೋಹನ್ ಕುಮಾರ ಸಿ.

ಬೆಂಗಳೂರು: ಬರ ಸಹಿಷ್ಣುತಳಿಗಳು, ಕೃಷಿ ಪರಿಕರಗಳು, ಹೊಸ ಕೃಷಿ ತಂತ್ರಜ್ಞಾನ ಪ್ರದರ್ಶನ ಒಳಗೊಂಡಿದ್ದ ಮೂರು ದಿನಗಳ ಕೃಷಿಮೇಳಕ್ಕೆ ಬುಧವಾರ ತೆರೆಬಿತ್ತು. ಮುಂದಿನ ಮುಂಗಾರಿಗೆ ಭರ್ಜರಿ ಇಳುವರಿಯ ಕನಸನ್ನೂ ಕೃಷಿಕರಲ್ಲಿ ಬಿತ್ತಿತ್ತು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ ನಡೆದ ಮೇಳಕ್ಕೆ 9.10 ಲಕ್ಷ ಮಂದಿ ಭೇಟಿ ನೀಡಿ, ಭರಪೂರ ಮಾಹಿತಿಯನ್ನು ಪಡೆದರು. ಕಡೇದಿನ 4.90 ಲಕ್ಷ ಜನರು ಬಂದಿದ್ದರು.

ಬರ ಪರಿಸ್ಥಿತಿ ಕಾರಣ ಸರಳವಾಗಿ ಆಯೋಜಿಸಿದ್ದ ಮೇಳದಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ, ತುಮಕೂರು ಸೇರಿದಂತೆ ಬೆಂಗಳೂರು ಸುತ್ತಮುತ್ತಲ ಜಿಲ್ಲೆಗಳ ರೈತರೇ ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದರು. ಶಾಲಾ-ಕಾಲೇಜು ವಿದ್ಯಾರ್ಥಿಗಳ ಸಂಖ್ಯೆಯೇ ಕೊನೆದಿನಹೆಚ್ಚಿತ್ತು.

100ಕ್ಕೂ ಹೆಚ್ಚು ಕೃಷಿ ಮಳಿಗೆಗಳಲ್ಲಿದ್ದ ರಾಜ್ಯದ ಐದು ಕೃಷಿ ವಿಶ್ವವಿದ್ಯಾಲಯಗಳು, ಐಸಿಎಆರ್-ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆ ಸೇರಿದಂತೆ ವಿವಿಧ ಕೃಷಿ ಸಂಸ್ಥೆಗಳ ಅವಿಷ್ಕಾರಗಳು, ತಂತ್ರಜ್ಞಾನಗಳನ್ನು ಕೃಷಿಕರು ಹಾಗೂ ನಾಗರಿಕರು ಪರಿಚಯಿಸಿಕೊಂಡರು. ಕೃಷಿ ಪರಿಕರಗಳನ್ನು ಪುಟಾಣಿಗಳು ಚಲಾಯಿಸಿದರು. ಆಹಾರ ಮೇಳದಲ್ಲೂ ಹೆಚ್ಚು ಜನರು ಕಂಡು ಬಂದರು.

ಕೃಷಿ ರೋಬೊ: 'ಎಲ್‌ಆರ್‌ಪ ಮಿತ್ರ' ಎಂಬ ಕೃಷಿ ರೋಬೊ ರೈತರ ಗಮನ



ರೇಷ್ಮೆಗೂಡಿನಿಂದ ಮಾಡಿದ ಹೂಗಳೊಂದಿಗೆ ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯ ಸಿಬ್ಬಂದಿ

ಸೆಳೆಯಿತು. ಮಣ್ಣು ಪರೀಕ್ಷೆ, ಬೆಳೆ ರೋಗಗಳ ಮಾಹಿತಿ ಇದರಲ್ಲಿದ್ದು, ರೈತರು ತಮ್ಮ ಭೂಮಿಯ ಮಣ್ಣಿನ ಕಾರ್ಡ್, ರೋಗ ಪೀಡಿತ ಸಸಿಯನ್ನು ಮುಂದಿಟ್ಟರೆ ಅದನ್ನು ಸ್ಕ್ಯಾನ್ ಮಾಡುವ ರೋಬೊ, ಪರಿಹಾರವನ್ನು ಸ್ಥಳದಲ್ಲೇ ಸೂಚಿಸಿತು.

'ಜಲಾನಯನ ಅಭಿವೃದ್ಧಿ ಇಲಾಖೆಯು ಈ ರೋಬೊ ಅಭಿವೃದ್ಧಿ ಪಡಿಸಿದ್ದು, ರೈತ ಸಂಪರ್ಕ ಕೇಂದ್ರಗಳಲ್ಲಿ ಇಡಲಾಗುತ್ತದೆ' ಎಂದು ಸಿಬ್ಬಂದಿ ಪ್ರದ್ಯುರಾಜ್ ತಿಳಿಸಿದರು.

ಸಸಿಗಳ ಮಾರಾಟ ಹೆಚ್ಚಳ: ಮೇಳದ ಕೊನೆ ದಿನ ಸಸಿಗಳನ್ನು ಖರೀದಿಸಲು ನಾಗರಿಕರು ಮುಗಿಬಿದ್ದರು. ಸಪೋಟ, ಮಾವು, ಕಾಫಿ, ನುಗ್ಗೆ, ಡ್ರ್ಯಾಗನ್ ಫ್ರೂಟ್, ಪಚ್ಚಬಾಳೆ, ಹಲಸು ಸೇರಿದಂತೆ ವಿವಿಧ ಸಸಿಗಳಿಗೆ ಬೇಡಿಕೆ ಇತ್ತು. ₹20ನಿಂದ ₹250ರವರೆಗೆ ಸಸಿಗಳಿಗೆ ದರವಿತ್ತು. ಜಿಕೆವಿಕೆ ಅಭಿವೃದ್ಧಿ ಪಡಿಸಿದ್ದ ಕೆಂಪು ಹಲಸು ಸಸಿಗಳು ಹೆಚ್ಚು ಮಾರಾಟವಾದವು.



ಕೃಷಿ ತ್ಯಾಜ್ಯದಿಂದ ಛಾವಣಿಗಳನ್ನು ಮಾಡಿರುವ ವಿದ್ಯಾರ್ಥಿಗಳೊಂದಿಗೆ ಮುಖ್ಯಸ್ಥ ರಘು

ಕಳೆದ ವರ್ಷಕ್ಕಿಂತ ಕಡಿಮೆ

ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮೇಳಕ್ಕೆ ಅತಿ ಕಡಿಮೆ ಸಂಖ್ಯೆಯಲ್ಲಿ ಬಂದಿದ್ದರು. ಆಗ ನಾಲ್ಕು ದಿನದ ಮೇಳಕ್ಕೆ 54.16 ಲಕ್ಷ ಮಂದಿ ಭೇಟಿ ನೀಡಿದ್ದರು. ಬರ ಪರಿಸ್ಥಿತಿ ಕಾರಣ ಸರಳವಾಗಿ ಮೇಳವನ್ನು ಆಯೋಜಿಸಿದ ಕಾರಣ ಮಳಿಗೆಗಳ ಸಂಖ್ಯೆ ಬಹುತೇಕ ಕಡಿಮೆ ಮಾಡಲಾಗಿತ್ತು. 100 ಮಳಿಗೆಗಳಿಗೆ ಸೀಮಿತ ಗೊಳಿಸಲಾಗಿತ್ತು. ಮೊದಲ ದಿನ 1.10 ಲಕ್ಷ, 2ನೇ ದಿನ 3.10 ಲಕ್ಷ ಹಾಗೂ ಕಡೇ ದಿನ 4.90 ಲಕ್ಷ ಜನರು ಬಂದಿದ್ದರು. ರಿಯಾಯಿತಿ ದರದಲ್ಲಿ 10 ಸಾವಿರ ಜನರು ಭೋಜನ ಸವಿದರು.

ಕೃಷಿ ತ್ಯಾಜ್ಯದಿಂದ ಛಾವಣಿ

'ಕೃಷಿ ತ್ಯಾಜ್ಯದಿಂದ ಛಾವಣಿ, ಬೋರ್ಡ್‌ಗಳನ್ನು ಮಾಡಬಹುದು' ಎಂಬುದನ್ನು ಕೃಷಿ ವಿಶ್ವವಿದ್ಯಾಲಯದ ವನ ವಿಜ್ಞಾನ ಕೇಂದ್ರವು ರೈತರಿಗೆ ತೋರಿಸಿಕೊಟ್ಟಿತು.

ತೆಂಗಿನ ನಾರಿನಿಂದ ಮಾಡಿದ ಛಾವಣಿ, ಕಬ್ಬಿನ ಸಿಪ್ಪೆ, ಸಿರಿಧಾನ್ಯದ ಹುಲ್ಲು, ಭತ್ತದ ಜೊಳ್ಳು ಹಾಗೂ ಹುಲ್ಲಿನಿಂದ ಮಾಡಿದ ಬೋರ್ಡ್‌ಗಳಿಂದ (ಪ್ಲೇವುಡ್ ಶೀಟ್ ಮಾದರಿ) ಗೃಹೋಪಯೋಗಿ ವಸ್ತುಗಳನ್ನು ತಯಾರಿಸಬಹುದು ಎಂಬ ಮಾಹಿತಿಯನ್ನು ವಿದ್ಯಾರ್ಥಿಗಳು ನೀಡಿದರು.

'ಹರಿಯಾಣ, ಪಂಜಾಬ್ ಸೇರಿದಂತೆ ಉತ್ತರ ಭಾರತದಲ್ಲಿ ಕೃಷಿ ತ್ಯಾಜ್ಯವನ್ನು ಸುಡಲಾಗುತ್ತದೆ. ರಾಜ್ಯದಲ್ಲೂ ಕೆಲವು ಭಾಗಗಳಲ್ಲಿ ಈ ದುಃಸ್ಥಿತಿ ಇದೆ. ವಾಯುಮಾಲಿನ್ಯ ತಡೆಗೆ ಹಾಗೂ ರೈತರಿಗೆ ಆದಾಯ ಸಿಗುವಂತಾಗಲು ಈ ಹೊಸ ತಂತ್ರಜ್ಞಾನ ವನ್ನು ಅಭಿವೃದ್ಧಿ ಪಡಿಸಲಾಗಿದೆ' ಎಂದು ಕೇಂದ್ರದ ಮುಖ್ಯಸ್ಥ ಎಚ್.ಬಿ.ರಘು ಹೇಳಿದರು.

ಜನಾಭಿಪ್ರಾಯವೇನು



ಮೊದಲ ಸಲ ಬಂದಿರುವೆ. ಮೈಕ್ರೊಬಯಾಲಜಿ ಓದುತ್ತಿರುವುದರಿಂದ ಕೀಟ ಪ್ರಪಂಚದ ಕೃಷಿ ಮಳಿಗೆ ಇಷ್ಟವಾಯಿತು

ಕಾವ್ಯಾ, ಚಿಕ್ಕಬಾಣಾವರ



ಬರ ಪರಿಸ್ಥಿತಿ ಎದುರಿಸುವುದು ಹೇಗೆಂಬ ಮಾಹಿತಿ ರೈತರಿಗೆ ಮೇಳದಿಂದ ಸಿಕ್ಕಿದೆ. ವಿಜ್ಞಾನ ವಿದ್ಯಾರ್ಥಿಯಾಗಿ ನನಗೆ ಮೇಳ ಖುಷಿಕೊಟ್ಟಿದೆ

ವರ್ಷಿಣಿ, ದೊಡ್ಡಬಳ್ಳಾಪುರ



ಕಬ್ಬು, ಭತ್ತ ನಮ್ಮ ಕಡೆ ಜಾಸ್ತಿ ಬೆಳೆಯುತ್ತಾರೆ. ಇಪ್ಪು ದೊಡ್ಡ ಮೇಳವನ್ನು ನೋಡಿರಲಿಲ್ಲ. ಬ್ಯಾಂಕ್ ಉದ್ಯೋಗಿಯಾಗಿರುವ ನನಗೆ ಕೃಷಿ ಆಸಕ್ತಿ ಹೆಚ್ಚು ಮಾಡಿದೆ

ದಿಗಂಬರ್, ಬೆಳಗಾವಿ



ಊರಿನಿಂದ ಎರಡು ಬಸ್‌ಗಳಲ್ಲಿ 110 ರೈತರು ಬಂದಿದ್ದೇವೆ. ಯಾವ ವರ್ಷದಲ್ಲೂ ಮೇಳವನ್ನು ತಪ್ಪಿಸಿಲ್ಲ. ಮಾಹಿತಿ ಪಡೆದು ಕೃಷಿಯಲ್ಲಿ ಅಳವಡಿಸಿಕೊಂಡಿರುವೆ

ಎನ್.ಗಂಗಾಧರ, ಚಿಕ್ಕಬಳ್ಳಾಪುರ



ನಮ್ಮದು ಒಣಭೂಮಿ. ರಾಗಿ, ತೊಗರಿ, ಅವರೆ ಬೆಳೆಯುತ್ತೇವೆ. ಬೀಜ ಖರೀದಿಸಲು ಬಂದಿದ್ದೆ. ತುಂಬಾ ಚೆನ್ನಾಗಿದೆ

ಜಯಲಕ್ಷ್ಮಿ, ಸೊಪ್ಪಳ್ಳಿ, ಆನೇಕಲ್

ರೇಷ್ಮೆ ಗೂಡಿನಲ್ಲಿ ಅರಳಿದ ಕಲೆ: ಚಿಂತಾಮಣಿಯ ರೇಷ್ಮೆ ಕೃಷಿ ಮಹಾವಿದ್ಯಾಲಯವು ಮಹಿಳೆಯರಿಗೆ ಸ್ವಾವಲಂಬಿ ಜೀವನ ಕಲ್ಪಿಸಲು 2009ರಲ್ಲಿ ಕಲಾ ತರಬೇತಿ ಕೇಂದ್ರವನ್ನು ಆರಂಭಿಸಿದ್ದು, ರೇಷ್ಮೆಗೂಡುಗಳಿಂದ ಕರಕುಶಲ ವಸ್ತುಗಳ ತಯಾರಿಸಲಾಗುತ್ತಿದೆ.

ಹಾರಗಳು, ಜಡೆ ಬಿಲ್ಲೆಗಳು, ಕಿವಿಯೋಲೆಗಳು, ಹೂವು ತುಂಬಿದ ಬುಟ್ಟ ಮಾಡಲಾಗಿತ್ತು. ಅದಲ್ಲದೇ ಟೊಮೊಟೊ ಕಟ್ಟಲು ಬಳಸುವ ತಂತಿ ಹಾಗೂ ರೇಷ್ಮೆ ಗೂಡಿನಿಂದ ಸಿದ್ಧಪಡಿಸಿದ್ದ ಹೂಗಳು ₹20ರಿಂದ ₹80ರವರೆಗೂ ಇದ್ದವು.

'₹1,500 ಪ್ರವೇಶ ಶುಲ್ಕದಲ್ಲಿ ರೇಷ್ಮೆ ಗೂಡಿನಿಂದ ಕರಕುಶಲ ವಸ್ತುಗಳನ್ನು ತಯಾರಿಸುವ ಕೋರ್ಸ್ ನೀಡಲಾಗುತ್ತದೆ. ಇದುವರೆಗೂ ನೂರಾರು ಮಂದಿ ತರಬೇತಿ ಪಡೆದಿದ್ದಾರೆ. ರಾಜ್ಯವಲ್ಲದೇ ಆಂಧ್ರಪ್ರದೇಶದಿಂದಲೂ ಹೆಚ್ಚು ಮಹಿಳೆಯರು ಬರುತ್ತಾರೆ' ಎಂದು ಸಂಸ್ಥೆಯ ಪಲ್ಲವಿ 'ಪ್ರಜಾವಾಣಿ'ಗೆ ತಿಳಿಸಿದರು.

Prajavani Pg 07

Viswavani Pg 09

3 ದಿನಗಳ ಬೆಂಗಳೂರು ವಿವಿ ಕೃಷಿ ಮೇಳ ಸಂಪನ್ನ

ಹವಾಮಾನ ಬದಲಾವಣೆ ಎದುರಿಸಲು ವೈಜ್ಞಾನಿಕ ಕೃಷಿಗೆ ಒತ್ತು | ಮೇಳಕ್ಕೆ ಒಟ್ಟು 9.10 ಲಕ್ಷಕ್ಕೂ ಹೆಚ್ಚು ಜನ ಭೇಟಿ

ನ ವಿಶ್ವವಾಣಿ ಸುದ್ದಿಮನೆ


ಬೆಂಗಳೂರು: ಕೃಷಿ ವಿಶ್ವವಿದ್ಯಾನಿಲಯದ ವತಿಯಿಂದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ನ.16ರಿಂದ ಮೂರು ದಿನಗಳ ಕಾಲ ಆಯೋಜಿಸಿದ್ದ ಕೃಷಿ ಮೇಳ ಬುಧವಾರ ಸಂಪನ್ನಗೊಂಡಿದೆ.

ಕೃಷಿ ಮೇಳ-2026ರ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಸದ ಡಾ. ಕೆ. ಸುಧಾಕರ್ ಮಾತನಾಡಿ, ಹವಾಮಾನ ಬದಲಾವಣೆ, ಅನಿಯಮಿತ ಮಳೆ, ಬರಗಾಲ, ಆಂತರ್ಜಲ ಕುಸಿತ ಹಾಗೂ ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳದ ಸವಾಲು ಎದುರಿಸಲು ರೈತರು ವೈಜ್ಞಾನಿಕ ಮತ್ತು ಹವಾಮಾನ ಸ್ನೇಹಿ ಕೃಷಿ ಪದ್ಧತಿ ಅಳವಡಿಸಿಕೊಳ್ಳಬೇಕು. ಕೃಷಿ ದೇಶದ ಆರ್ಥಿಕತೆಯ ಆಧಾರಸ್ತಂಭ ಹಾಗೂ ಆಹಾರ ಭದ್ರತೆಯ ಜೀವನಾಡಿಯಾಗಿದೆ. ರೈತರು ಸಮೃದ್ಧರಾದಾಗ ಗ್ರಾಮಗಳು ಅಭಿವೃದ್ಧಿಯಾಗುತ್ತವೆ, ಗ್ರಾಮಗಳ ಅಭಿವೃದ್ಧಿಯಿಂದ ರಾಜ್ಯ ಮತ್ತು ದೇಶ ಪ್ರಗತಿ ಸಾಧಿಸುತ್ತವೆ ಎಂದರು.

ಮುನ್ನೆಚ್ಚರಿಕೆ ಅಗತ್ಯ: ಅನಿಯಮಿತ ಮಳೆ, ದೀರ್ಘಕಾಲದ ಒಣಹವೆ, ಬರಗಾಲ, ಮಣ್ಣಿನ ಫಲವತ್ತತೆ ಕುಂಠಿತವಾಗುತ್ತಿರುವುದು ಹಾಗೂ ನೀರಿನ ಕೊರತೆ ಕೃಷಿ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತಿವೆ. ಈ ಹಿನ್ನೆಲೆಯಲ್ಲಿ ಕೃಷಿ ಮೇಳದಲ್ಲಿ ಬರ ನಿರ್ವಹಣಾ ತಂತ್ರಜ್ಞಾನ, ಹವಾಮಾನ ಸ್ನೇಹಿ ಕೃಷಿ ಪದ್ಧತಿ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಸುಧಾರಿತ ಬೆಳೆ ತಳಿಗಳು ಹಾಗೂ ಆಧುನಿಕ ಕೃಷಿ ತಂತ್ರಜ್ಞಾನಗಳಿಗೆ ಆದ್ಯತೆ ನೀಡಿರುವುದು ಶ್ಲಾಘನೀಯ ಎಂದರು.

ಎಲ್ ನಿನೋ ಪರಿಣಾಮದಿಂದ ಕರ್ನಾಟಕದ ಕೃಷಿ ಕ್ಷೇತ್ರದ ಮೇಲೆ ಉಂಟಾಗಬಹುದಾದ ಪರಿಣಾಮಗಳು ಮತ್ತು ಮುನ್ನೆಚ್ಚರಿಕೆ ಕ್ರಮಗಳ ಕುರಿತು ತಜ್ಞರ ವಿಚಾರ ಸಂಕಿರಣ ಆಯೋಜಿಸಿರುವುದು ಸಮಯೋಚಿತವಾಗಿದೆ. ಸಮಸ್ಯೆ ಎದುರಾದ ಬಳಿಕ ಪರಿಹಾರ ಹುಡುಕುವುದಕ್ಕಿಂತ ಮುನ್ನವೇ ವೈಜ್ಞಾನಿಕವಾಗಿ ಸಿದ್ಧರಾಗಬೇಕು.

ಬರ ನಿರೋಧಕ ಬೆಳೆ ತಳಿಗಳ ಬಳಕೆ, ಹನಿ ನೀರಾವರಿ, ಮಳೆನೀರು ಸಂಗ್ರಹಣೆ, ಜಲಾನಯನ ಅಭಿವೃದ್ಧಿ, ಮಣ್ಣಿನ ತೇವಾಂಶ ಸಂರಕ್ಷಣೆ ಹಾಗೂ ಬೆಳೆ ವೈವಿಧ್ಯೀಕರಣಕ್ಕೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು.



ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಸಂಸದ ಡಾ. ಕೆ. ಸುಧಾಕರ್ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದರು. ಈ ವೇಳೆ ಕೃಷಿ ಇಲಾಖೆ ಆಯುಕ್ತ ಡಾ. ಸತೀಶ್, ಕೃಷಿ ವಿಶ್ವವಿದ್ಯಾನಿಲಯದ ಕುಲಪತಿ ಡಾ. ಪಿ. ವೆಂಕಟರವಣ, ವ್ಯವಸ್ಥಾಪನಾ ಮಂಡಳಿ ಸದಸ್ಯ ನವೀನ್, ಡಾ. ಕೆ.ಎಸ್. ರಾಜಶೇಖರಪ್ಪ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.

ಕೃಷಿ ಮೇಳಕ್ಕೆ ಭೇಟಿ ನೀಡಿದರ ಸಂಖ್ಯೆ
ಮೊದಲ ದಿನ-1.10 ಲಕ್ಷ
ಎರಡನೇ ದಿನ-3.10 ಲಕ್ಷ
ಮೂರನೇ ದಿನ -4.90
ಒಟ್ಟು 9.10 ಲಕ್ಷ ಜನ ಭಾಗಿ



ಕೃಷಿ ಕೇವಲ ಸಾಂಪ್ರದಾಯಿಕ ಬೆಳೆಗಳಿಗೆ ಸೀಮಿತವಾಗಿಲ್ಲ. ಆಹಾರ ಸಂಸ್ಕರಣೆ, ಮೌಲ್ಯವರ್ಧನೆ, ಬೀಜೋತ್ಪಾದನೆ, ನಿಖರ ಕೃಷಿ, ಡಿಜಿಟಲ್ ಕೃಷಿ, ಕೃಷಿ ಉದ್ಯಮೀಲತೆ ಹಾಗೂ ಕೃಷಿ ಆಧಾರಿತ ಸ್ಟಾರ್ಟ್‌ಅಪ್‌ಗಳ ಮೂಲಕ ಯುವಜನತೆಗೆ ವಿಪುಲ ಅವಕಾಶಗಳಿವೆ. ವಿಶ್ವವಿದ್ಯಾನಿಲಯ ವಿದ್ಯಾರ್ಥಿಗಳನ್ನು ಕೃಷಿ ವಿಜ್ಞಾನಿ, ಉದ್ಯಮಿ, ಸಂಶೋಧಕರು ಹಾಗೂ ಗ್ರಾಮೀಣ ಅಭಿವೃದ್ಧಿಯ ನಾಯಕರಾಗಿ ರೂಪಿಸಬೇಕು.

-ಡಾ. ಕೆ. ಸುಧಾಕರ್, ಸಂಸದ

ಗಂಟೆಗೆ 60 ಕೆ.ಜಿ. ಕಾಳು ಬಿಡಿಸುವ ಯಂತ್ರ ಅಭಿವೃದ್ಧಿ

ಕೃಷಿ ಕಾರ್ಯ ಸುಲಭಗೊಳಿಸುವ ಉದ್ದೇಶದಿಂದ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿಕೆವಿಕೆ ಆವರಣದಲ್ಲಿ ಗಂಟೆಗೆ 60 ಕೆ.ಜಿ. ಅವರೆಕಾಯಿ, ಹಸಿ ಬಟಾಣಿ ಹಾಗೂ ಅಲಸಂದಿ ಕಾಳುಗಳನ್ನು ಬೇರ್ಪಡಿಸುವ ಸಾಮರ್ಥ್ಯದ ನೂತನ ಯಂತ್ರ ಎಲ್ಲರ ಗಮನ ಸೆಳೆದಿದೆ. ಜಿಕೆವಿಕೆಯ ಕಟಾವಿನ ನಂತರದ ಕೃಷಿ ಉತ್ಪನ್ನಗಳ ಸಂಸ್ಕರಣೆ ಮತ್ತು ತಂತ್ರಜ್ಞಾನ ಯೋಜನೆಯಡಿ ಈ ಯಂತ್ರ ಅಭಿವೃದ್ಧಿಪಡಿಸಲಾಗಿದ್ದು, ಕೃಷಿಮೇಳದಲ್ಲಿ ಪ್ರದರ್ಶನಕ್ಕೆ ಇಡಲಾಗಿದೆ. ಯಂತ್ರದ ಅಂದಾಜು ವೆಚ್ಚ 40 ಸಾವಿರ ರು. ಆಗಿದ್ದು, ಸಣ್ಣ ರೈತರಿಗೆ ಅನುಕೂಲವಾಗಲಿದೆ. ಆಸಕ್ತ ಕಂಪನಿಗಳು ತಂತ್ರಜ್ಞಾನ ಪಡೆದು ಉತ್ಪಾದನೆ ಆರಂಭಿಸಬಹುದಾಗಿದೆ ಎಂದು ಸಂಶೋಧನಾ ಇಂಜಿನಿಯರ್ ಡಾ. ಶಶಿಕಲಾ ಬಾಯಿ ತಿಳಿಸಿದ್ದಾರೆ.

ರೈತರ ಹೊಲಗಳಿಗೆ ವಿಜ್ಞಾನಿಗಳು ತೆರಳಲಿ: ಕೃಷಿ ವಿಶ್ವವಿದ್ಯಾನಿಲಯಗಳು ಸುಧಾರಿತ ಬೆಳೆ ತಳಿಗಳ ಅಭಿವೃದ್ಧಿ, ನೂತನ ತಂತ್ರಜ್ಞಾನಗಳ ಆವಿಷ್ಕಾರ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಪರಿಚಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಿವೆ. ಕೃಷಿ ಮೇಳವು ರೈತರು, ವಿಜ್ಞಾನಿಗಳು, ಕೃಷಿ ಉದ್ಯಮಿಗಳು, ವಿದ್ಯಾರ್ಥಿಗಳು, ಸಂಶೋಧಕರು ಹಾಗೂ ನೀತಿ ನಿರೂಪಕರು ಒಂದೇ ವೇದಿಕೆಯಲ್ಲಿ ಜ್ಞಾನ ವಿನಿಮಯ ಮಾಡಿಕೊಳ್ಳುವ ಪರಿಣಾಮಕಾರಿ ವೇದಿಕೆಯಾಗಿದೆ ಎಂದು ತಿಳಿಸಿದರು.

ಆಧುನಿಕ ಕೃಷಿ ತಂತ್ರಜ್ಞಾನದತ್ತ ರೈತರ ಒಲವು

ಮೂರು ದಿನದ ಕೃಷಿ ಮೇಳಕ್ಕೆ ತೆರೆ: 9ಲಕ್ಷ ಜನರ ಭೇಟಿ। ಕೃಷಿಮೇಳಕ್ಕೆ ಬರದ ಛಾಯೆ

▪ ಅಕ್ಷತಾ ಮಿರಜಕರ


ಸಂ.ಕ. ಸಮಾಚಾರ, ಬೆಂಗಳೂರು

ತೀವ್ರ ಬರ, ಹವಾಮಾನ ವೈಪರೀತ್ಯ ಹಾಗೂ ಅನೇಕ ಕೃಷಿ ಸವಾಲುಗಳ ಮಧ್ಯೆ ಜಿಕೆವಿಕೆಯಲ್ಲಿ ಮೂರು ದಿನ ನಡೆದ ಕೃಷಿಮೇಳಕ್ಕೆ ಬುಧವಾರ ಅಂತಿಮ ತೆರೆ ಬಿದ್ದಿದೆ.

ಈ ಬಾರಿ ಬೆಂಗಳೂರು ಕೃಷಿ ವಿವಿ ವ್ಯಾಪ್ತಿಯ ಆರು ಜಿಲ್ಲೆಗಳ 36 ತಾಲೂಕುಗಳ ಪೈಕಿ 34 ತಾಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದೆ. ಈ ಹಿನ್ನೆಲೆಯಲ್ಲಿ ಈ ಬಾರಿ ಒಂದೇ ದಿನ ಮೇಳವನ್ನು ನಡೆಸುವ ಉದ್ದೇಶ ಹೊಂದಲಾಗಿತ್ತು. ಆದರೆ ಕೃಷಿ ಸಚಿವರ ಸೂಚನೆ ಮೇರೆಗೆ ಮೂರು ದಿನಗಳ ಕಾಲ ಕೃಷಿಮೇಳ ನಡೆಸಲಾಯಿತಾದರೂ ಇದೀ ಕೃಷಿಮೇಳಕ್ಕೆ ಬರದ ಛಾಯೆ ಆವರಿಸಿತ್ತು.

ಕಳೆದ ಬಾರಿ ನಾಲ್ಕು ದಿನಗಳಲ್ಲಿ 54.1 ಲಕ್ಷ ಜನರು ಮೇಳಕ್ಕೆ ಭೇಟಿ ನೀಡಿದ್ದರು. ಈ ಬಾರಿ ಮೂರುದಿನಗಳಲ್ಲಿ ಅಂದಾಜು 9.10 ಲಕ್ಷ ಜನರು ಭೇಟಿ ನೀಡಿದರು.

ಕೃಷಿ ಮೇಳದ ಮೊದಲ ದಿನ 1.10 ಲಕ್ಷ ಮಂದಿ, ಎರಡನೇ ದಿನ 3.10 ಲಕ್ಷ ಹಾಗೂ ಮೂರನೇ ದಿನ 4.90ಲಕ್ಷ ಮಂದಿ ಭೇಟಿ ನೀಡಿದ್ದಾರೆ. ಆಧುನಿಕ ಕೃಷಿ ತಂತ್ರಜ್ಞಾನ, ಸುಧಾರಿತ ಬೆಳೆ ತಳಗಳು, ಸಿರಿಧಾನ್ಯ ಆಧಾರಿತ ನೀರಾವರಿ ವ್ಯವಸ್ಥೆ ಹಾಗೂ ಕಡಿಮೆ ನೀರಿನಲ್ಲಿ ಹೆಚ್ಚು ಇಳುವರಿ ಪಡೆಯುವ ವಿಧಾನಗಳ ಬಗ್ಗೆ ರೈತರು ಆಸಕ್ತಿ ತೋರಿದ್ದು, ಮೇಳವು ಕೃಷಿ ಕ್ಷೇತ್ರದ ಹೊಸ ಸಾಧ್ಯತೆಗಳನ್ನು ಪರಿಚಯಿಸಿತು.



ಮೇಳದಲ್ಲಿ ವಿವಿಧ ಕೃಷಿ ಸಂಶೋಧನೆ ಮತ್ತು ನೂತನ ತಂತ್ರಜ್ಞಾನಗಳನ್ನು ಪ್ರದರ್ಶಿಸಲಾಯಿತು. 10 ಎಕರೆ ಪ್ರದೇಶದಲ್ಲಿ 75 ಬಗೆಯ ಬೆಳೆ ಮತ್ತು ತಳಿಗಳು ನೋಡುಗರ ಗಮನ ಸೆಳೆಯುತ್ತಿತ್ತು.

ಬರ ನಿರ್ವಹಣೆ, ಹವಾಮಾನ ಬದಲಾವಣೆಗೆ ಅನುಗುಣವಾಗಿ ಕೃಷಿ ಪದ್ಧತಿಗಳ ಆಳವಡಿಕೆ, ಮಣ್ಣಿನ ಫಲವತ್ತತೆ ಸಂರಕ್ಷಣೆ,ನೀರಿನ ಮಿತವ್ಯಯ ಹಾಗೂ ಸಾವಯವ ಕೃಷಿ ಪ್ರಾತ್ಯಕ್ಷಿಕೆಗಳು ಮೇಳದ ಪ್ರಮುಖ ಆಕರ್ಷಣೆಯಾಗಿದ್ದವು.

ಮೇಳದಲ್ಲಿ ಭಾಗವಹಿಸಿದ ರೈತರು ಕೃಷಿ ಸಂಶೋಧನೆಗಳು ಕೇವಲ ಪ್ರದರ್ಶನಕ್ಕೆ ಸೀಮಿತವಾಗದೆ, ಹೊಲಗಳಲ್ಲಿ ಅನುಷ್ಠಾನಗೊಳ್ಳುವಂತೆ ಕೃಷಿ ವಿಶ್ವವಿದ್ಯಾಲಯಗಳು ಮುಂದಿನ ದಿನಗಳಲ್ಲಿಯೂ ಮಾರ್ಗದರ್ಶನ ನೀಡಬೇಕು ಎಂಬ ನಿರೀಕ್ಷೆ ವ್ಯಕ್ತಪಡಿಸಿದರು.

ಕೃಷಿ ಮೇಳದಲ್ಲಿ ಗಮನ ಸೆಳೆದ ಸಮಗ್ರ ಕೃಷಿ:

ರೈತರು ಕೃಷಿಯನ್ನು ಲಾಭದಾಯಕವಾಗಿಸಲು ಬೆಳೆ ಕೃಷಿಯೊಂದಿಗೆ ಪಿಪಿಧ ಉಪಕಸುಬುಗಳನ್ನು ಸಂಯೋಜಿಸಿ, ಲಭ್ಯ ಸಂಪನ್ಮೂಲಗಳ ಸಮರ್ಥ ಬಳಕೆಗೆ ಒತ್ತು ನೀಡುವ ಸಮಗ್ರ ಕೃಷಿ ಪದ್ಧತಿ ಕೃಷಿ ಮೇಳದಲ್ಲಿ ನೋಡುಗರನ್ನು ಸೆಳೆದಿತ್ತು. ಕೃಷಿ, ಪಶುಸಂಗೋಪನೆ, ತೋಟಗಾರಿಕೆ ಹಾಗೂ ಇತರ ಉಪಕಸುಬುಗಳನ್ನು ಪರಸ್ಪರ ಪೂರಕವಾಗಿ ಬೆಳೆಸುವ ವ್ಯವಸ್ಥೆ ರೈತನ ಜಮೀನಿನಲ್ಲಿ ಲಭ್ಯವಿರುವ ನೀರು, ಮಣ್ಣು, ಜಾಗ, ಕುಟುಂಬದ ದುಡಿಮೆ ಮತ್ತು ಸ್ಥಳೀಯ ಸಂಪನ್ಮೂಲಗಳನ್ನು ಸಮರ್ಥವಾಗಿ ಬಳಸಿಕೊಂಡು ಕೃಷಿ ಚಟುವಟಿಕೆಗಳನ್ನು ಯೋಜಿಸುವುದು ಇದರ ಮೂಲ ಆಶಯ. ಬೆಳೆ ಕೃಷಿಯೊಂದಿಗೆ ಹೈನುಗಾರಿಕೆ, ಕುರಿ–ಮೇಕೆ ಸಾಕಣೆ, ಕೋಳಿ ಸಾಕಣೆ, ಮೀನುಗಾರಿಕೆ, ಜೇನು ಸಾಕಣೆ, ಅಣಬೆ ಕೃಷಿ ಹಾಗೂ ಸಾವಯವ ಗೊಬ್ಬರ ತಯಾರಿಕೆಯಂತಹ ಚಟುವಟಿಕೆಗಳನ್ನು ಸಂಯೋಜಿಸುವ ಮೂಲಕ ಆದಾಯದ ಹಲವು ದಾರಿಗಳನ್ನು ರೈತರು ಕಂಡುಕೊಂಡಿದ್ದಾರೆ.

ವೈಜ್ಞಾನಿಕ ಕೃಷಿ ಪದ್ಧತಿ ಅಳವಡಿಕೆಗೆ ಸಂಸದ ಕರೆ

ಬೆಂಗಳೂರು: ರೈತರು ವೈಜ್ಞಾನಿಕ ಕೃಷಿ ಪದ್ಧತಿಗಳನ್ನು ಅಳವಡಿಸಿಕೊಳ್ಳುವ ಮೂಲಕ ಹವಾಮಾನ ಬದಲಾವಣೆ, ಬರಗಾಲ ಹಾಗೂ ನೀರಿನ ಅಭಾವದಂತಹ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಬೇಕು ಎಂದು ಚಿಕ್ಕಬಳ್ಳಾಪುರ ಲೋಕಸಭಾ ಕ್ಷೇತ್ರದ ಸಂಸದ ಡಾ. ಕೆ. ಸುಧಾಕರ್ ಕರೆ ನೀಡಿದರು.

ಗಾಂಧಿ ಕೃಷಿ ವಿಜ್ಞಾನ ಕೇಂದ್ರದ ಆವರಣದಲ್ಲಿ ಕೃಷಿ ವಿಶ್ವವಿದ್ಯಾನಿಲಯದ ವತಿಯಿಂದ ನ.16ರಿಂದ ಮೂರು ದಿನಗಳ ಕಾಲ ಆಯೋಜಿಸಿದ್ದ ಕೃಷಿ ಮೇಳ–2026ರ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು. ಕೃಷಿ ದೇಶದ ಆರ್ಥಿಕತೆಯ ಆಧಾರಸ್ತಂಭವಾಗಿದ್ದು, ಆಹಾರ ಭದ್ರತೆ ಹಾಗೂ ಗ್ರಾಮೀಣ ಬದುಕಿನ ಜೀವನಾಡಿಯಾಗಿದೆ. ರೈತರು ಸಮೃದ್ಧರಾದಾಗ ಮಾತ್ರ ಗ್ರಾಮಗಳ ಅಭಿವೃದ್ಧಿ ಸಾಧ್ಯ ಆದರೆ. ಅನಿಯಮಿತ ಮಳೆ, ದೀರ್ಘಕಾಲದ ಒಣಹವೆ, ಅಂತರ್ಜಲ ಮಟ್ಟ ಕುಸಿತ, ಮಣ್ಣಿನ ಫಲವತ್ತತೆ ಕ್ಷೀಣಿಸುತ್ತಿರುವುದು, ಕೃಷಿ ಉತ್ಪಾದನಾ ವೆಚ್ಚ ಹೆಚ್ಚಳ ಹಾಗೂ ಹವಾಮಾನ ಬದಲಾವಣೆಗಳು ಕೃಷಿ ಕ್ಷೇತ್ರಕ್ಕೆ ಸವಾಲಾಗಿವೆ ಎಂದರು. ಈ ಹಿನ್ನೆಲೆಯಲ್ಲಿ ಕೃಷಿ ಮೇಳದಲ್ಲಿ ಬರ ನಿರ್ವಹಣಾ ತಂತ್ರಜ್ಞಾನ, ಹವಾಮಾನ ಸ್ನೇಹಿ ಕೃಷಿ ಪದ್ಧತಿ, ಮಣ್ಣು ಮತ್ತು ನೀರಿನ ಸಂರಕ್ಷಣೆ, ಸುಧಾರಿತ ಬೆಳೆ ತಳಗಳು ಹಾಗೂ ಆಧುನಿಕ ಕೃಷಿ ತಂತ್ರಜ್ಞಾನಗಳಿಗೆ ಆದ್ಯತೆ ನೀಡಿರುವುದು ಶ್ಲಾಘನೀಯ. ಎಲ್‌ನಿನೊ ಪರಿಣಾಮದಿಂದ ರಾಜ್ಯದ ಕೃಷಿ ಕ್ಷೇತ್ರದ ಮೇಲಾಗಬಹುದಾದ ಪರಿಣಾಮಗಳು ಹಾಗೂ ಮುನ್ನೆಚ್ಚರಿಕೆ ಕ್ರಮಗಳ ಕುರಿತು ತಜ್ಞರ ವಿಚಾರ ಸಂಕಿರಣ ಆಯೋಜಿಸಿರುವುದು ಸಮಯೋಚಿತವಾಗಿದೆ ಎಂದು ಹೇಳಿದರು.

S-karnataka Pg 05

Kannadaprabha Pg 01 & 05

ಸಂಕಷ್ಟದ ರೈತರಿಗೆ ನೆರವು ಅಗತ್ಯ: ಸುಧಾಕರ್

ಜಿಕೆವಿಕೆಯಲ್ಲಿನ ನಡೆದ 3 ದಿನಗಳ ಕೃಷಿ ಮೇಳ ಸಮಾರೋಪದಲ್ಲಿ ಅಭಿಮತ



ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಿಂದ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಮೂರು ದಿನಗಳ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಲೋಕಸಭಾ ಸದಸ್ಯ ಡಾ.ಕೆ.ಸುಧಾಕರ್ ಅವರು ಸಾಧಕ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದರು.

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಬರದ ಹಿನ್ನೆಲೆಯಲ್ಲಿ ಅನೇಕ ರೈತರು ಆತ್ಮಹತ್ಯೆ ಮಾಡಿಕೊಂಡಿರುವುದು ದುರ ದೃಷ್ಟಕರವಾಗಿದೆ. ಹೀಗಾಗಿ ರಾಜ್ಯ ಸರ್ಕಾರ ಸೂಕ್ತ ಪರಿಹಾರ ನೀಡಬೇಕು. ಆಶ್ವಾಸನೆ, ಭಾಷಣಗಳಿಂಗಿತ ನೆರವು ಇಂದಿನ ಅಗತ್ಯವಾಗಿದೆ ಎಂದು ಚಿಕ್ಕಬಳ್ಳಾಪುರ ಲೋಕಸಭಾ ಸದಸ್ಯ ಡಾ.ಕೆ.ಸುಧಾಕರ್ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹೆಬ್ಬಾಳದ ಜಿಕೆವಿಕೆಯಲ್ಲಿ ಆಯೋಜಿಸಿದ್ದ ಮೂರು ದಿನಗಳ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ನಮ್ಮ ರೈತರು ಬೆವರನ್ನು ಸುರಿಸಿ ಕೃಷಿ ಮಾಡುತ್ತಿದ್ದಾರೆ. ಆದರೆ ಅವರು ಕಣ್ಣೀರು ಸುರಿಸಿ ಕೃಷಿ ಮಾಡುವಂತಹ ಕೆಲಸ ಆಗ ಬಾರದು. ಪ್ರಧಾನಿ ನರೇಂದ್ರ ಮೋದಿ ಅವರು ಕೃಷಿ ಕ್ಷೇತ್ರಕ್ಕೆ ಆದ್ಯತೆ ನೀಡುತ್ತಿದ್ದಾರೆ. ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ಯೋಜನೆಯಡಿ ಪ್ರತಿ ರೈತರಿಗೆ ವಾರ್ಷಿಕ6 ಸಾವಿರರು. ನೀಡಲಾಗುತ್ತಿದ್ದು ಇಲ್ಲಿಯವರೆಗೂ 23 ಕಂತುಗಳ ಹಣ ಪಾವತಿಯಾಗಿದೆ. ದೇಶದ 9.5 ಕೋಟಿ ರೈತರು ಇದರ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಹೇಳಿದರು.

ವಿಜ್ಞಾನಿಗಳು ಚಂದ್ರನ ಮೇಲೆ ಕಾಲಿಡಬೇಕಾದರೂ ರೈತ ಅತ್ಯಂತ ಅಗತ್ಯವಾಗಿದ್ದಾನೆ. ರೈತ ಇಲ್ಲದಿದ್ದರೆ ವಿಜ್ಞಾನವೂ ಇಲ್ಲ, ವ್ಯಾಪಾರವೂ ಇಲ್ಲ, ಆಳ್ವಿವ್ಯದ್ದಿಯೂ ಇಲ್ಲವಾಗುತ್ತದೆ. ಒಟ್ಟಾರೆ ಹೇಳ ಬೇಕೆಂದರೆ ರೈತ ಇಲ್ಲದಿದ್ದರೆ ನಾಗರೀಕತೆಯೇ ಇರುವುದಿಲ್ಲ, ಯೋಧರು, ವಿಜ್ಞಾನಿಗಳಿಗೂ ರೈತ ಬೇಕೇ ಬೇಕು. ರೈತ ತನಗೋಸ್ಕರ ದುಡಿಯದೇ ಸಮಾಜಕ್ಕೆ ಕೊಡುಗೆ ನೀಡುತ್ತಾನೆ. ದೇವರಿಗೆ ನೈವೇದ್ಯ ಇಡಬೇಕೆಂದರೂ ರೈತ ಬೆಳೆದ ಬೆಳೆಗಳು ಬೇಕು ಎಂದರು.

ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಯ ಪ್ರಗತಿಪರ ರೈತರಿಗೆ ಪ್ರಶಸ್ತಿ ಪ್ರದಾನ ಮಾಡಿದ್ದೇನೆ. ಇಲ್ಲಿನ ರೈತರು ಇಂದು ಬೆಳೆದಿರುವುದು ಕೇವಲ ಬೆಳೆಯಲ್ಲ, ಇತರ ರೈತರಲ್ಲಿ ಬೆಳೆಸಿದ ಭರವಸೆಯಾಗಿದೆ. ಈ ಜಿಲ್ಲೆಗಳಲ್ಲಿ ಯಾವುದೇ ಜೀವನದಿ ಇಲ್ಲ. ಅಂತರ್ಜಲಮಟ್ಟ ಕುಸಿದಿದೆ. ಹೀಗಿದ್ದರೂ ತರಕಾರಿ, ಹೂವು, ಹಣ್ಣು, ಸೊಪ್ಪು ಬೆಳೆದು ರಾಜ್ಯ, ದೇಶಕ್ಕೆ ಕೊಡುಗೆ ನೀಡುತ್ತಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲಾ ಮತ್ತು ತಾಲೂಕು ಮಟ್ಟದ ಪ್ರಗತಿಪರ ರೈತ, ರೈತ ಮಹಿಳೆಯರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಕೃಷಿ ಇಲಾಖೆ ಆಯುಕ್ತ ಡಾ.ಸತೀಶ್, ಕೃಷಿ ವಿವಿ ಕುಲಪತಿ ಡಾ.ಪಿ.ವೆಂಕಟರವಣ ಮತ್ತಿತರರು ಉಪಸ್ಥಿತರಿದ್ದರು.

Prajavani Pg 07

ಹೊಸ ವ್ಯವಸ್ಥೆ ಪಾರದರ್ಶಕ ವಿತರಣೆ, ಕೃತಕ ಅಭಾವ ಸೃಷ್ಟಿಗೆ ಬ್ರೇಕ್

ರಸಗೊಬ್ಬರ ಎಲ್ಲಿದೆ?: ಇನ್ನುಂದೆ ಆ್ಯಪಲ್ಲಿ ಹುಡುಕಿ, ಅಲ್ಲೇ ಖರೀದಿಸಿ

ಸರ್ಕಾರದ ಹೊಸ ಡಿಜಿಟಲ್ ವ್ಯವಸ್ಥೆ ಶೀಘ್ರವೇ ಜಾರಿ

• **ಸೋಮರಡ್ಡಿ ಅಳವಂಡಿ**
ಕನ್ನಡಪ್ರಭ ವಾರ್ತೆ ಕೊಪ್ಪಳ

ರಸಗೊಬ್ಬರ ಖರೀದಿಗಾಗಿ ಅಂಗಡಿಗಳ ಮುಂದೆ ಸರತಿ ಸಾಲಿನಲ್ಲಿ ನಿಲ್ಲುವುದು, ಗೊಬ್ಬರಕ್ಕಾಗಿ ಒಂದು ಅಂಗಡಿ ಯಿಂದ ಮತ್ತೊಂದು ಅಂಗಡಿಗೆ ಅಲೆಯುವುದು, ಬೇಡಿಕೆಯ ಸಮ ಯದಲ್ಲಿ ದಾಸ್ತಾನು ಇಲ್ಲದೆ ಬರಿಗೈ ಯಲ್ಲಿ ಮರಳುವುದು ಸೇರಿದಂತೆ ರೈತರು ಎದುರಿಸುತ್ತಿರುವ ಸಮಸ್ಯೆ ಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶ ದಿಂದ ಕೇಂದ್ರ ಸರ್ಕಾರ ರಸಗೊಬ್ಬರ ಖರೀದಿಗೆ 'ಡಿಜಿಟಲ್ ಬುಕ್ಕಿಂಗ್' ವ್ಯವಸ್ಥೆ ರೂಪಿಸಿದೆ.



ಇನ್ನು ರೈತರು ಆ್ಯಪ್‌ನಲ್ಲಿ ಆರ್ಡರ್ ಸಲ್ಲಿಸಿ ರಸಗೊಬ್ಬರ ಖರೀದಿಸಬಹುದು. ರಾಜ್ಯ ಸರ್ಕಾರ ಡಿಸೆಂಬರ್‌ನಲ್ಲಿ ರಾಜ್ಯಾದ್ಯಂತ ಈ ವ್ಯವಸ್ಥೆ ಜಾರಿ ಮಾಡಲಿದೆ. ↘ 10

ರೈತರಿಗೆ ಹೇಗೆ ಲಾಭ?

- ಪ್ರತಿ ವರ್ಷ ಕೃಷಿ ಹಂಗಾಮಿನ ವೇಳೆ ರಾಜ್ಯದ ರೈತರಿಗೆ ಕಾಡುವ ರಸಗೊಬ್ಬರದ ಕೊರತೆ
- ಈ ಸಮಸ್ಯೆಗೆ ಪೂರ್ಣ ಕೊರತೆಯ ಜೊತೆಗೆ ಕಾಳಸಂತೆಲಿ ಮಾರಾಟ ಆಗುವುದೂ ಕಾರಣ
- ಆಕ್ರಮ ಮಾರಾಟಕ್ಕೆ ಬ್ರೇಕ್ ಹಾಕಲೆಂದೇ ಹೊಸ ಆ್ಯಪ್ ರಚನೆ, ಶೀಘ್ರವೇ ಬಿಡುಗಡೆ
- ಇದರಲ್ಲಿ ಅಂಗಡಿಗಳಲ್ಲಿ ಇರುವ ರಸಗೊಬ್ಬರ ದಾಸ್ತಾನಿನ ಕುರಿತು ಸಂಪೂರ್ಣ ಮಾಹಿತಿ
- ರೈತರು ಆ್ಯಪ್‌ನಲ್ಲಿ ಗೊಬ್ಬರ ಎಲ್ಲಿದೆ ಎಂದು ಪರಿಶೀಲಿಸಿ ಆದರಲ್ಲೇ ಬುಕ್ ಮಾಡಬಹುದು

ರಸಗೊಬ್ಬರ ಎಲ್ಲಿದೆ?: ಆ್ಯಪಲ್ಲಿ ಹುಡುಕಿ, ಅಲ್ಲೇ ಖರೀದಿಸಿ

↘ 10ನೇ ಪುಟದಿಂದ

ರೈತರು ತಮ್ಮ ತಾಲೂಕಿನ ರಸಗೊಬ್ಬರ ಮಾರಾಟ ಮಳಿಗೆಗಳ ದಾಸ್ತಾನು ಮಾಹಿತಿಯನ್ನು ತಮ್ಮ ಮೊಬೈಲ್‌ನಲ್ಲಿ ಪರಿಶೀಲಿಸಿ, ತಮಗೆ ಬೇಕಾದ ರಸಗೊಬ್ಬರವನ್ನು ಮೊಬೈಲ್ ಮೂಲಕವೇ ಕಾಯ್ದಿರಿಸಬಹುದು. ಮೂರು ದಿನದೊಳಗೆ ಖರೀದಿದಾರರಿಗೆ ಸ್ವಯಂಚಾಲಿತವಾಗಿ ಅದು ದಾಸ್ತಾನಾಗಲಿದೆ.

ಒಂಗ ರಸಗೊಬ್ಬರ ಪಡೆಯಲು ಒಂದಷ್ಟು ಪತ್ರಗಳಿಗೆ. ಎಫ್‌ಎಂಡಿ ಮೂಲಕ ತಿಂಗಳಿಗೆ ಒಂದಲ್ಲಾ ಒಂದು ಸಲವಾದರೂ ಸಂಪರ್ಕಿಸಬೇಕಾಗುತ್ತದ